MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 312 | ಮಂಗಳವಾರ : 30-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 312 | TUESDAY : 30-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ವೀಣಾ ಬನ್ನಂಜೆ ಯವರಿಂದ ಅಲ್ಲಮ್ಮ ಪ್ರಭುದೇವರ ವಚನ ನಿರ್ವಚನ

ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.29–** ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀ ಕಲ್ಮಠ ದಸರಾ ಸುವರ್ಣ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಅಲ್ಲಮ್ಮ ಪ್ರಭುದೇವರ ವಚನ ನಿರ್ವಚನ ಕುರಿತು ಅಧ್ಯಾತ್ಮಿಕ ಚಿಂತಕರಾದ ವೀಣಾ ಬನ್ನಂಜೆ ಉಪನ್ಯಾಸ ನೀಡಿ ನಾಡಿನಲ್ಲಿ 8ನೂರು ವರ್ಷಗಳ ಹಿಂದೆ ಶರಣರು ಬಂದು ಹೋಗಿದ್ದಾರೆ ಎಂದು ತಿಳಿಯುವುದು ನಮ್ಮ ತಪ್ಪು ಭಾವನೆ ಶರಣರು ತಮ್ಮ ವಚನಗಳ ಮೂಲಕ ಅಂದಿಗೂ ಇಂದಿಗೂ ಕೂಡ ನಮ್ಮೊಂದಿಗೆ ಇದ್ದಾರೆ. 12 ನೇ ಶತಮಾನದ ಬಸವಣ್ಣನವರು, ಅಕ್ಕಮಹಾದೇವಿಯವ ರು, ಅಜಗಣ್ಣನವರು ಸೇರಿದಂತೆ ಅನೇಕ ಶರಣರು, ದಾಸವಣ್ಯರು ಇದ್ದ ನೆಲದಲ್ಲಿ ನಾವು ಕೂಡ ಇದ್ದಿವಿ ಎನ್ನುವುದು ಕೂಡ ನಮ್ಮ ಪುಣ್ಯಾವಾ



ಗಿದೆ. ಬೇರೆಯೆ ವಚನ ಲೋಕದಲ್ಲಿ ತಮ್ಮದೆ ಆದ ವಿಷೇಶವಾಗಿದ ಅಲ್ಲಮ್ಮರು ತಮ್ಮ ವಚನಗಳ ಮೂಲಕ ತೆರೆದುಕೊಂಡು ಹೋಗುತ್ತಾರೆ.ಅಲ್ಲಮ್ಮರು ತಮ್ಮ ಗುಹೇಶ್ವರಲಿಂಗ ಎನ್ನುವ ಅಂಕಿತದಿಂದ ವಚನಗಳನ್ನು ರಚಿಸಿದ ಅವರು ಎಲ್ಲಿಯವರೆಗೆ ಅಜ್ಞಾನ ,ಮಾಯೆ ಇರುತ್ತದೆಯೋ ಅಲ್ಲಿಯವರೆಗೆ ಸಾವು, ನೋವುಗಳನ್ನು ಸಂಭವಿಸುತ್ತ ಇರುತ್ತದೆ ಅದ್ವೈತವ ತಿಳಿದವರು.ಅಕ್ಷರವನ್ನು ತಿಳಿದಿದೆಯೆಂದು, (2ನೇಪುಟಕ್ಕೆ)

## ಶ್ರೀಕಲ್ಮಠ ದಸರಾ ಸುವರ್ಣ ಮಹೋತ್ಸವ ಅಂಗವಾಗಿ ರೈತ ವಿಚಾರಗೋಷ್ಠಿ

ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.29–**ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಶ್ರೀ ಕಲ್ಮಠ ದಸರಾ ಸುವರ್ಣ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ನಡೆದ ರೈತ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಸಾವಯಾವ ವಿಭಾಗದ ಮುಖ್ಯಸ್ಥರಾದ ಡಾ.ಎಂ.ಬಸವಣ್ಣೆಪ್ಪ ಉತ್ತಮ ಆರೋಗ್ಯಕ್ಕಾಗಿ ಸಾವಯವ ಆಹಾರ ಕುರಿತು ಉಪನ್ಯಾಸ ನೀಡಿ ಸ್ವಾತಂತ್ರ್ಯ ನಂತರ ಭಾರತ ದೇಶದಲ್ಲಿ ಆಹಾರ ಕೊರತೆಯನ್ನು ನಿವಾರಿಸುವುದ ಕ್ಕಾಗಿ ಕೃಷಿಯಲ್ಲಿ ಹಸಿರು ಕ್ರಾಂತಿ ನಡೆಯಿ ತು. ಅಂದಿನ ದಿನಗಳಲ್ಲಿ ಸರ್ಕಾರದಿಂದ ಹೆಚ್ಚು ಆಹಾರ ಧಾನ್ಯಗಳ ಉತ್ಪದಾನೆಗಾಗಿ ರೈತರಿಗೆ ರಾಸಾಯನಿಕ ಗೊಬ್ಬರ ಬಳಕೆ ಹಾಗೂ ಹೆಚ್ಚು ಇಳುವರಿ ನೀಡುವ ಹೈಬ್ರೀಡ್ ತಳಿಗಳನ್ನು ಬೆಳೆಯುವಂತೆ ಪ್ರೋತ್ಸಾಹ ನೀಡಿದರಿಂದ ರೈತರು ಸಂಪ್ರಾದಾಯಿಕ ಕೃಷಿಯನ್ನು ಬಟ್ಟು ಸುಧಾರಿತ ಕೃಷಿಗೆ ಹೆಚ್ಚಿನ ಅದ್ಯತೆಯನ್ನು ನೀಡಿದರಿಂದ ಹೆಚ್ಚು ಇಳುವರಿಯನ್ನು ಪಡೆದರು ಕೂಡ ನಮ್ಮ



ಭೂಮಿಯ ಫಲಾವತ್ತತೆ ಕಡಿಮೆಯಾಗುತ್ತ ಬಂದಿದೆ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಗೆ ರಾಸಾಯನಿಕ ಕೀಟನಾಶಕಗಳನ್ನು ಬಳಸುತ್ತಿರುವುದರಿಂದ ಇಂತಹ ಆಹಾರ ಉತ್ಪನ್ನಗಳನ್ನು ಬಳಸುವುದರಿಂದ ಕ್ಯಾನ್ಸರ್ ನಂತಹ ಮಾರಕ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಅದ್ದರಿಂದ ಉತ್ತಮ ಆರೋಗ್ಯಕರ ಆಹಾರಕ್ಕಾಗಿ ರೈತರು ಸಾವಯವ ಪದ್ದತಿಯಲ್ಲಿ ಆಹಾರಧಾನ್ಯಗಳನ್ನು ಹಾಗೂ ಹಣ್ಣು , ತರಕಾರಿಗಳನ್ನು, ಬೆಳೆಯಬೇಕು ಪ್ರತಿಯೊಬ್ಬರು ಕೂಡ ತಮ್ಮ ಮನೆಗಳ ಛಾವಣಿಗಳ ಮೇಲೆ ಕೈತೋಟವನ್ನು ಮಾಡಿಕೊಳ್ಳಬಹುದು, ಹಾಗೂ ಹೈಡ್ರೋಪೋನಿಕ್ ವಿಧಾನದ ಮೂಲಕವು ತಮ್ಮ ಮನೆಗಳಲ್ಲಿ ಅಗತ್ಯವಿರುವ ತರಕಾರಿಗಳನ್ನು ಬೆಳೆದು ಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಪುರಾಣ ಪ್ರವಚನವನ್ನು ಶ್ರೀ ಅನ್ನದಾನಸ್ವಾಮಿಗಳು ನೀಡಿದರು, ಸಾವಯವ ಕೃಷಿಕರಾದ ಅನ್ನಪೂರ್ಣಮ್ಮ ನಾಗರಬೆಂಚಿ ರವರಿಗೆ ರಾಜ್ಯಮಟ್ಟದ ಸುವರ್ಣ ದಸರಾ ಸಾಧಕ ಸೀರಿ ಪ್ರಶಸ್ತಿಯನ್ನು ನೀಡಿ (2ನೇಪುಟಕ್ಕೆ)

## ಅ. 7ಕ್ಕೆ ವಾಲ್ಮೀಕಿ ಜಯಂತಿ: ಭವನ ನಿರ್ಮಾಣದ ವಿಷಯಕ್ಕೆ ಗದ್ದಲ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.29–** ರಾಮಾಯಣ ಮಹಾಕಾವ್ಯ ನೀಡಿದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅಕ್ಟೋಬರ್ 7 ರಂದು ಮಾನ್ವಿಯಲ್ಲಿ ಅರ್ಥಪೂರ್ಣವಾಗಿ ಆಚರಿಸಲು ತಹಸೀಲ್ದಾರ್ ಭೀಮರಾಯ ಬಿ. ರಾಮಸಮುದ್ರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಆದರೆ, ಸಭೆಯಲ್ಲಿ ವಾಲ್ಮೀಕಿ ಭವನ ನಿರ್ಮಾಣ ವಿಳಂಬದ ವಿಷಯಕ್ಕೆ ಸಂಬಂಧಿಸಿದಂತೆ ಸಮುದಾಯದ ಮುಖಂಡರು ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗಳ ನಡುವೆ ವಾಗ್ವಾದ ನಡೆದು ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು.

ಸಭೆಯಲ್ಲಿ ಸಮುದಾಯದ ಹಿರಿಯರಾದ ರಾಜಾ ಶ್ಯಾಮಸುಂದರ ನಾಯಕ ಮಾತನಾಡಿ, ಪ.ಪಂಗಡ ಮೀಸಲಾತಿ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ವಾಲ್ಮೀಕಿ ಭವನಕ್ಕಾಗಿ ಬೇಡಿಕೆ ಇಡುತ್ತಿದ್ದರೂ ಸೂಕ್ತ ನಿವೇಶನ ಗುರುತಿಸಲು ಸಾಧ್ಯವಾಗದಿರುವುದರಿಂದ ಭವನ ನಿರ್ಮಾಣಕ್ಕೆ ಮಂಜೂರಾದ ಅನುದಾನ ಸರ್ಕಾರಕ್ಕೆ ವಾಪಸಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೂಡಲೇ ಶಾಸಕರ ನೇತೃತ್ವದಲ್ಲಿ ತಾಲೂಕು ಆಡಳಿತ, ಪ.ಪಂಗಡ ಕಲ್ಯಾಣ ಇಲಾಖೆ, ಪುರಸಭೆ ಸೇರಿದಂತೆ ಸಂಬಂಧಿತ ಎಲ್ಲಾ ಇಲಾಖೆಗಳು ಮತ್ತು ಸಮುದಾಯದವರ ಸಭೆ ಕರೆದು ಭವನ ನಿರ್ಮಾಣಕ್ಕೆ ಚಾಲನೆ ನೀಡುವಂತೆ ಒತ್ತಾಯಿಸಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಸಮುದಾಯದ ಮುಖಂಡರು ಹಾಗೂ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಜೋರು ಧ್ವನಿಯಲ್ಲಿ ವಾಗ್ವಾದ ನಡೆಸಿದ್ದರಿಂದ ಸಭೆಯಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಗಿತ್ತು. ಪಿ.ಐ. ಸೋಮಶೇಖರ ಎಸ್. ಕೆಂಚರೆಡ್ಡಿ ಅವರು ಮಧ್ಯ ಪ್ರವೇಶಿಸಿ ಸಮುದಾಯದವರನ್ನು ಸಮಾಧಾನ ಪಡಿಸಿದರು.

ಅ. 7 ರಂದು ಸರ್ಕಾರದಿಂದ ಶ್ರೀ ವಾಲ್ಮೀಕಿ ಮಹರ್ಷಿಗಳ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ತಾಲೂಕಿನ ಎಲ್ಲಾ ಇಲಾಖೆಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು ಮತ್ತು ನಂತರ ತಾಲೂಕು ಆಡಳಿತದಿಂದ ನಡೆಯುವ ಮುಖ್ಯ ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದ ರೂಪುರೇಷೆಯ ಪ್ರಕಾರ, ಮೊದಲಿಗೆ ಶ್ರೀ ವಾಲ್ಮೀಕಿ ಮಹರ್ಷಿಗಳ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ನಂತರ, ಶಾಸಕ ಹಂಪಯ್ಯನಾಯಕರವರು ಶ್ರೀ ವಾಲ್ಮೀಕಿ ಮಹರ್ಷಿಗಳ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಪಟ್ಟಣದ ಪ್ರಮುಖ ಬೀದಿಗಳ ಮೂಲಕ ತಹಸೀಲ್ದಾರ್ ಕಚೇರಿಯ ಆವರಣದಲ್ಲಿನ ವೇದಿಕೆ ಯವರೆಗೆ ಸಾರೋಟಿನಲ್ಲಿ ಮೆರವಣಿಗೆ (2ನೇಪುಟಕ್ಕೆ)

## ಯುವ ಸಮೂಹ ಸಂಸ್ಕಾರ ಜೊತೆಗೆ ಗುಣಮಟ್ಟ ಶಿಕ್ಷಣ ಪಡೆದುಕೊಳ್ಳಿ : ಡಿವೈಎಸ್‌ಪಿ ಕರ್ನಾಡ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.29–**ದೇಶಕ್ಕೆ ಯುವ ಸಮೂಹ ಪ್ರಮುಖವಾಗಿದ್ದು, ಇಂದಿನ ಯುವಕರು ಸಂಸ್ಕಾರ ಜೊತೆಗೆ ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳಬೇಕೆಂದರು ಎಂದು ಡಿವೈಎಸ್‌ಪಿ ದತ್ತಾತ್ರೇಯ ಕರ್ನಾಡ ಹೇಳಿದರು.

ತಾಲೂಕಿನ ಸಮೀಪ ನೀರಲಕೇರಿ ಗ್ರಾಮದಲ್ಲಿ ಗುರು ಪಂಚಾಕ್ಷರಿ, ಬಸಲಿಂಗ ಶ್ರೀಗಳ ಮೂಲಮಠದಲ್ಲಿ ದಸಾರ ಹಬ್ಬದ ನಿಮಿತ್ತ ಹಮ್ಮಿಕೊಂಡಿದ್ದ ಸಾಧಕರ ಸಮಾಗಮ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತತ್ವಪದಗಳ ರಚನೆ ಮಾಡುವ ಮೂಲಕ ಬಸಲಿಂಗ ಶರಣರು ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಲು ಶ್ರಮಿಸಿದ್ದಾರೆ. ಶರಣರ ಸಂಸ್ಕಾರದ ಹಾದಿಯಲ್ಲಿ ಇಂದಿನ ಸಮಾಜ ಸಾಗಬೇಕು ಅದ್ಯಾತ್ಮಿಕ ಚಿಂತನೆಯಲ್ಲಿ ಬದುಕು ಸಾರ ಅಡಗಿದ್ದು ಪಾಪ, ಪುಣ್ಯದ ಚಿಂತನೆಗಳು ಮನುಷ್ಯನನ್ನು ಉತ್ತಮ ಹಾದಿ ಕರೆದುಕೊಂಡು ಹೋಗುತ್ತವೆ. ಜನರು



ಶರಣ ತತ್ವದಲ್ಲಿ ಎಚ್ಚರಿಕೆಯಿಂದ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಲ್ಯಾಣ ಕರ್ನಾಟಕ ದಾಸರು, ಶರಣರು, ಸಂತರು, ಸೂಫಿಗಳು ನಡೆದಾಡಿದ ನೆಲವಾಗಿದೆ. ಈ ಪ್ರದೇಶದಲ್ಲಿ ಆಧ್ಯಾತ್ಮಿಕ ಶಕ್ತಿ ಅಡಗಿರುತ್ತದೆ. ಜನ ಸಮುದಾಯದಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸುವ ಜೊತೆಗೆ ಯುವ ಪೀಳಿಗೆಗೆ ಉತ್ತಮ ಶಿಕ್ಷಣ ದೊರಕಿಸಿಕೊಡಬೇಕು ಎಂದು ಸಮೀಪದ ಗಡಿಯ ನೀರಲಕೇರಿ ಗ್ರಾಮದಲ್ಲಿ ಗುರು ಪಂಚಾಕ್ಷರಿ, ಬಸಲಿಂಗ ಶ್ರೀಗಳ ಮೂಲಮಠದಲ್ಲಿ ದಸಾರ ಉತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಸಾಧಕರ ಸಮಾಗಮ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಕ್ಕಳಿಗೆ ಶಿಕ್ಷಣದ ಜೊತೆಗ ಸಂಸ್ಕಾರ ಅಗತ್ಯವಾಗಿದೆ, ಶಿಕ್ಷಣ ಕೊಡಿಸುವ ಜೊತೆಗೆ ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು, ಏಕೆಂದರೆ ಮನೆಯೇ ಮೊದಲ ಪಾಠ ಶಾಲೆ ತಾಯಿಯೇ ಮೊದಲು ಗುರು. ಮಕ್ಕಳ ಮೇಲೆ ಕುಟುಂಬದ ಪ್ರಭಾವ ಇರುತ್ತದೆ ಆದ್ದರಿಂದ ಪಾಲಕರು, ತಂದೆ-ತಾಯಿಗಳು ಸಂಸ್ಕಾರದ ಬದುಕು ಸಾಗಿಸಿದರೆ ಮಕ್ಕಳು ಉತ್ತಮ(2ನೇಪುಟ)

## ಧರ್ಮ ಬೌದ್ಧ, ಜಾತಿ ಪರಿಶಿಷ್ಟ ಜಾತಿ, ಉಪ ಜಾತಿ ಚಲುವಾದಿ ಬರೆಯಿಸಿ : ಲಿಂಗಪ್ಪ ಪರಂಗಿ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.29–** ಸಮೀಕ್ಷೆ ಆರಂಭವಾಗಿದ್ದು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಸಂದರ್ಭದಲ್ಲಿ ಚಲುವಾದಿ ಸಮುದಾಯದ ಜನರು ಧರ್ಮ ಬೌದ್ಧ ಜಾತಿ ಪರಿಶಿಷ್ಟ ಜಾತಿ, ಉಪಜಾತಿ ಚಲುವಾದಿ ಎಂದು ಬರೆಯಿಸಬೇಕೆಂದು ಚಲುವಾದಿ ಸಮಾಜದ ತಾಲೂಕ ಅಧ್ಯಕ್ಷ ಲಿಂಗಪ್ಪ ಪರಂಗಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಈಗಾಗಲೆ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಆರಂಭಗೊಂಡಿದೆ. ಈಗಾಗಲೆ ರಾಜ್ಯದಮಟ್ಟದಲ್ಲಿ ಚಲುವಾದಿ ಸಮುದಾಯದ ಜನರು ಸಮೀಕ್ಷೆಯಲ್ಲಿ ಏನು ಬರೆಯಿಸಬೇಕೆಂದು ಸಭೆ ನಡೆಸಿ ತೀರ್ಮಾನಿಸಲಾಗಿದೆ. ಅದರಂ





ತೆ ಧರ್ಮ ಬೌದ್ಧ, ಜಾತಿ ಪರಿಶಿಷ್ಟ ಜಾತಿ ಉಪ ಜಾತಿ ಚಲವಾದಿ ಎಂದು ಬರೆಯಿಸಬೇಕು. ಹಿಂದು ಧರ್ಮದಿಂದ ಬೌದ್ಧ, ಸಿಕ್ಕ ಧರ್ಮ ಎಂದು ಬರೆಯಿಸಿದರೆ ಮೀಸಲಾತಿಗೆ ಯಾವುದೇ ದಕ್ಕೆಯಾಗುವು ದಿಲ್ಲ. ಇದರಿಂದ ಚಲುವಾದಿ ಸಮುದಾ ಯದ ಜನರು ಧರ್ಮ ಭೌದ್ದ ಜಾತಿ ಪರಿಶಿಷ್ಟ ಜಾತಿ ಉಪಜಾತಿ ಚಲುವಾದಿ ಎಂದು ಬರೆಯಿಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ ಶರಣಪ್ಪ ಹುನಕುಂಟಿ, ಗಂಗಾಧರ ನೀರಲಕೇರಿ, ಮಂಜುನಾಥ, ಬಸವರಾಜ ಬಡಿಗೇರ, ಶಿವಣ್ಣ ಪರಂಗಿ, ಚಿದಾನಂದ ಕಸಬಾಲಿಂಗಸುಗೂರ ಇದ್ದರು

## 2,96,230 ರೂ. ಮೌಲ್ಯದ ಗಾಂಜಾ ವಿಲೇವಾರಿ

ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.29–**ನಗರದ ವಿವಿಧ ಠಾಣೆಗಳಲ್ಲಿ ಜಪ್ತಿ ಮಾಡಿದ್ದ 2,96,230 ರೂ.ಗಳ ಮೌಲ್ಯದ 7 ಕೆಜಿ 101 ಗ್ರಾಂ ಗಾಂಜಾವನ್ನು ಪೊಲೀಸ್ ಮಹಾನಿದೇಶಕರು ಮತ್ತು ಮಹಾ ನಿರೀಕ್ಷರು, ಕರ್ನಾಟಕ ರಾಜ್ಯ, ಬೆಂಗಳೂರು ಅವರ ಸೂಚನೆಯ ಮೇರೆಗೆ ನಗರದ ಯಕ್ಲಾಸಪುರ ರಸ್ತೆಯಲ್ಲಿರುವ ವೈದ್ಯಕೀಯ ತಾಜ್ಯ ವಿಲೇವಾರಿ ಘಟಕದಲ್ಲಿ ವಿಲೇವಾರಿ ಮಾಡಲಾಯಿತು.

2023ನೇ ಹಾಗೂ 2025ನೇ ಸಾಲಿನಲ್ಲಿ ವರದಿಯಾದ ಒಟ್ಟು 12 ಪ್ರಕರಣಗಳಲ್ಲಿ ವಶಪಡಿಸಿಕೊಳ್ಳಲಾದ ಗಾಂಜಾವನ್ನು ಮಾದಕ ವಸ್ತು ವಿಲೇವಾರಿ ಸಮಿತಿಯ ಅಧ್ಯಕ್ಷರು ಆತರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ ಪುಟ್ಟಮಾದಯ್ಯ ಅವರ ನೇತೃತ್ವದಲ್ಲಿ ವಿಲೇವಾರಿ ಮಾಡಲಾಯಿತು.

ರಾಯಚೂರು ಪಶ್ಚಿಮ ಠಾಣೆ, ಯರಗೇರಾ ಪೊಲೀಸ್ ಠಾಣೆ, ಬಳಗಾ



ನೂರು ಪೊಲೀಸ್ ಠಾಣೆ, ಇಡಪನೂರು ಪೊಲೀಸ್ ಠಾಣೆ, ಸಿರವಾರ ಪೊಲೀಸ್ ಠಾಣೆ, ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆ, ನೇತಾಜಿನಗರ ಪೊಲೀಸ್ ಠಾಣೆ, ರಾಯಚೂರು ಗ್ರಾಮೀಣ ಠಾಣೆಗಳಲ್ಲಿ ಈ ಗಾಂಜಾವನ್ನು ಜಪ್ತಿ ಮಾಡಲಾಗಿತ್ತು.

ರಾಯಚೂರು ಉಪ ವಿಭಾಗದ ಡಿ.ಎಸ್.ಪಿ ಆಗಿರುವ ಸಮಿತಿಯ ಸದಸ್ಯರಾದ ಶಾಂತವೀರ, ಸಿ.ಇ.ಎನ್ ಪೊಲೀಸ್ ಠಾಣೆಯ ಡಿಎಸ್‌ಪಿ ವೆಂಕಟೇಶ, ಆರ್‌ಐಎಮ್ ಎಸಿಟಿ ಅಧ್ಯಕ್ಷರಾದ ಡಾ.ಶ್ರೀಶೈಲೇಶ್ ಅಮರಖೇಡ್, ಟೆಕ್ನಿಕಲ್ ಆಫೀಸರ್ ಜಯಕುಮಾರ, ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಾಯಕ ಪರಿಸರ ಅಧಿಕಾರಿ ಗಿರೀಶ್, ಡಿಸಿಆರ್‌ಬಿ ಘಟಕದ ಪೊಲೀಸ್ ಇನ್ಸಪೆಕ್ಟರ್ ತಿಮ್ಮಣ್ಣ. ಎಸ್., ಡಿಸಿಆರ್‌ಬಿ ಘಟಕದ ಪಿ.ಎಸ್.ಐ ಶಾರದಾ, ಅಬಕಾರಿ ಅಧೀಕ್ಷಕರು ಚಂದ್ರಶೇಖರ, ಅರಣ್ಯ ಇಲಾಖೆಯ ದ್ವಿತೀಯ ದರ್ಜೆ ಸಹಾಯಕ ರಾಮಯ್ಯ ಇವರ ಸಮಕ್ಷಮದಲ್ಲಿ ನಗರದ ಯಕ್ಲಾಸಪುರ ರಸ್ತೆಯಲ್ಲಿರುವ ವೈದ್ಯಕೀಯ ತಾಜ್ಯ ವಿಲೇವಾರಿ ಘಟಕದಲ್ಲಿ ವಿಲೇವಾರಿ ಮಾಡಲಾಯಿತು.

## ಮೊದಲನೇಯ ಪುಟದಿಂದ

# ಶ್ರೀಕಲ್ಮಠ ದಸರಾ ಸುವರ್ಣ ಮಹೋತ್ಸವ ಅಂಗವಾಗಿ ರೈತ ವಿಚಾರಗೋಷ್ಠಿ

ಗೌರವಿಸಲಾಯಿತು. ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ನೀಲಗಲ್ ಸಂಸ್ಥಾನ ಮಠದ ಶ್ರೀ ರೇಣುಕಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು. ಮಾನ್ವಿ ನಗರಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ ಸೇರಿದಂತೆ ಇನ್ನಿತರರು ಇದ್ದರು.

# ವೀಣಾ ಬನ್ನಂಜೆ ಯವರಿಂದ ಅಲ್ಲಮ್ಮ ಪ್ರಭುದೇವರ ವಚನ ನಿರ್ವಚನ

ಗುರುಹಿರಿಯರ ಉಪಾದೇಶದಿಂದ ತಿಳಿದವುಗಳಿಂದ ಅಹಾಂಕರದಿಂದ ವಾದಿಸುವವರಿಗೆ ಭಕ್ತಿ ,ಯುಕ್ತಿ , ಮುಕ್ತಿಯನ್ನು ಗೋತ್ತಲ್ಲದ ಯಾವುದೇ ವಾದ ವ್ಯರ್ಥ ಎನ್ನುತ್ತಾರೆ . ಅದರಾಚೆಗೆ ಇರುವುದನ್ನು ಹುಡುಕಿ ಎಂದವರು ಅಲ್ಲಮ್ಮರು. ಶರಣರ ವಚನಗಳಲ್ಲಿ ಕಂಡಂತೆ ಮಾಯೆ ಎನ್ನುವುದು ಎಲ್ಲ ಶರಣರನ್ನು ಕಾಡಿದೆ ಅದ್ದರೆ ಅಲ್ಲಮ್ಮನಿಗೆ ಮಾತ್ರ ಮಾಯೆ ಎಂದು ಕಾಡಿಲ್ಲ , ನಾವು ಯಾವುದು ಇಲ್ಲವೇ ಅದ್ದಕ್ಕೆ ನಾವು ಅಂಟಿಕೊಂಡಿದೇವೆ, ಅಲ್ಲಮ್ಮನ ಎದೆಯೋಳಗಿನ ಗುಹೆ ಒಳಗಿನ ಭಗವಂತನನ್ನು ಕಾಣುವವರಿಗೆ ಗುಹೇಶ್ವರ ಕಾಣುತ್ತಾನೆ. ಜ್ಞಾನ ಪರಂಪರೆಯಿಂದ ಅಲ್ಲಮ್ಮನನ್ನು ಓದೋಣ್ಣ ಎಂದರೆ ಅಲ್ಲಮ್ಮ ಹೇಳಿದಂತೆ ಇದು ಓದುವುದರಿಂದ ಬರುವುದಿಲ್ಲ, ನಾವೆಲ್ಲರು ಅಜ್ಞಾನದಲ್ಲಿರುವವರು ಹುಟ್ಟು ,ಸಾವಿನಲ್ಲಿ ಬಳಲುತ್ತಿರುವವರು ನಾವು. ನಾವು ಯಾವುದು ಇಲ್ಲವೋ ಅಲ್ಲಿ ನಾವು ವಾಸಿಸುತ್ತಿದೇವೆ. ಆರೋಗ್ಯಕರ ವಚನಗಳಿಂದ ಸೌಹಾರ್ದತೆಯನ್ನು ಕಾಣುವುದಕ್ಕೆ ಸಾಧ್ಯ ಅದ್ದರೆ ಇಂದು ಶರಣರ ವಚನಗಳ ಹೇಸರಿನಲ್ಲಿ ಒಡೆಯುವ ಕಾರ್ಯ ನಡೆಯುತ್ತಿದೆ. ಎಂದು ತಿಳಿಸಿದರು.

ಶ್ರೀದೇವಿ ಪುರಾಣ ಪ್ರವಚನವನ್ನು ಶ್ರೀ ಅನ್ನದಾನಸ್ವಾಮಿಗಳು ನೀಡಿದರು, ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಅಜೀಜಾ ಸುಲ್ತಾನಾ ರವರಿಗೆ ರಾಜ್ಯಮಟ್ಟದ ಸುವರ್ಣ ದಸರಾ ಸಾಧಕ ಸೀರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯಶಿವಾಚಾರ್ಯಮಹಾಸ್ವಾಮಿಗಳು, ಬೃಹನ್ಮಠ ನೀಲಗಲ್ ಸಂಸ್ಥಾನ ಮಠದ ಶ್ರೀ ರೇಣುಕಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು. ವಿಶ್ವಹಿಂದೂ ಪರಿಷತ್ ತಾ.ಅಧ್ಯಕ್ಷರಾದ ವಿಜಯಕುಮಾರ ಇಬ್ರಾಂಪುರ ಸೇರಿದಂತೆ ಇನ್ನಿತರರು ಇದ್ದರು.

# ಯುವ ಸಮೂಹ ಸಂಸ್ಕಾರ ಜೊತೆಗೆ ಗುಣಮಟ್ಟ ಶಿಕ್ಷಣ ಪಡೆದುಕೊಳ್ಳಿ : ಡಿವೈಎಸ್‌ಪಿ ಕರ್ನಾಡ

ನಾಗರೀಕರು ಆಗುತ್ತಾರೆ ಎಂದು ತಿಳಿಸಿದರು.ಸಮಾರಂಭದಲ್ಲಿ ಸಂತೆಕೆಲ್ಲೂರು ಘನಮಠದ ಗುರುಬಸವ ಶ್ರೀಗಳು, ಲಾಡ ಮೂಗಳಿ ವಿರಕ್ತಮಠದ ಅಭಿನವ ಬಸವಲಿಂಗ ಶ್ರೀ, ಕೃಷಿ ಇಲಾಖೆ ವಾಣಿಶ್ರೀ, ಹಿರಿಯ ನ್ಯಾಯವಾದಿ ನಾಗರಾಜ ಗಸ್ತಿ, ಪಿಡಿಓ ಬಸವರಾಜ ವಸ್ತ್ರದ, ಹುಲ್ಲಪ್ಪ ಹೆಚ್.ಜಿ, ಉಪನ್ಯಾಸಕ ಶಿವಗ್ಯಾನಪ್ಪ ಲಕ್ಕುಂದಿ, ಪತ್ರಕರ್ತರ ಸಂಘದ ಅಧ್ಯಕ್ಷ ಗುರುರಾಜ ಗೌಡೂರು, ಮುಖ್ಯಗುರು ಹೊನ್ನಪ್ಪ ಮೇಟಿ, ಷೇರಶಾ ದೋಟಿಹಾಳ, ರುದ್ರಯ್ಯ ಹಿರೇಮಠ, ಶಿಕ್ಷಕ ವಿರೇಶ, ಶಿವಕುಮಾರಯ್ಯ, ಬಸಲಿಂಗಪ್ಪ ಬಳಿಗಾರ, ರುದ್ರಪ್ಪ ಬರಿಗಂಟಿ, ಚಂದ್ರಶೇಖರ ದೇಶಮುಖ, ಬಸಲಿಂಗಪ್ಪ ಕುರಿ, ಶರಣಪ್ಪ, ಗೌಡಪ್ಪ ಪೂಜಾರಿ, ರಮೇಶ ಮೂಲಿಮನಿ, ಸಾಹೇಬರೆಡ್ಡಿ, ಶರಣಬಸವ ಕೊಡಿಹಾಳ, ಚಂದ್ರಶೇಖರ ಹಾದಿಮನಿ, ರಮೇಶ ಮೂಲಿಮನಿ ಸೇರಿದಂತೆ ಇದ್ದರು

# ಅ. 7ಕ್ಕೆ ವಾಲ್ಮೀಕಿ ಜಯಂತಿ: ಭವನ ನಿರ್ಮಾಣದ ವಿಷಯಕ್ಕೆ ಗದ್ದಲ

ನಡೆಯಲಿದೆ. ನಂತರ ವೇದಿಕೆ ಕಾರ್ಯಕ್ರಮದಲ್ಲಿ ವಾಲ್ಮೀಕಿ ಮಹರ್ಷಿಗಳ ಜೀವನ ತತ್ವಗಳ ಕುರಿತು ಉಪನ್ಯಾಸ ಏರ್ಪಡಿಸಲಾಗಿದ್ದು, ಇದರೊಂದಿಗೆ ಸಮುದಾಯದ ಸಾಧಕರಿಗೆ ಸನ್ಮಾನ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಅರ್ಥಪೂರ್ಣ ಆಚರಣೆಗಾಗಿ ಸಮುದಾಯದವರು ಹಾಗೂ ಸಾರ್ವಜನಿಕರು ಸಹಕಾರ ನೀಡುವಂತೆ ತಹಸೀಲ್ದಾರ್ ಕೋರಿದರು.

ಸಭೆಯಲ್ಲಿ ತಾ.ಪಂ. ಇ.ಓ. ಖಾಲೀದ್ ಅಹಮ್ಮದ್, ತಾ. ಪ.ಪಂಗಡಗಳ ಕಲ್ಯಾಣಾಧಿಕಾರಿ ಮಹಾಲಿಂಗಪ್ಪ ಇಂಗಳದಾಳ್, ಸಮಾಜ ಕಲ್ಯಾಣಾಧಿಕಾರಿ ನಟರಾಜ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ಶಿಶು ಅಭಿವೃದ್ಧಿ ಅಧಿಕಾರಿ ಮನ್ಸೂರ್ ಅಹಮ್ಮದ್, ತಾ. ಆರೋಗ್ಯಧಿಕಾರಿ ಡಾ. ಶರಣಬಸವರಾಜ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು. ಇದರ ಜೊತೆಗೆ ವಾಲ್ಮೀಕಿ ಸಮಾಜದ ಹಿರಿಯ ಮುಖಂಡರಾದ ಬುಡ್ಡಪ್ಪನಾಯಕ, ಅಯ್ಯಪ್ಪನಾಯಕಮ್ಯಾಕಲ್, ಆಂಜನೇಯ್ಯ ಜಲ್ಲಿ, ಶರಣಬಸವರಾಜನಾಯಕ, ರಾಮಣ್ಣನಾಯಕ, ವಿ.ಬಿ.ನಾಯಕ, ಆಂಜಿನೇಯ್ಯನಾಯಕ, ಹನುಮೇಶನಾಯಕ ಸದಾಪುರ್, ಅಂಬಣ್ಣನಾಯಕ, ಚಂದ್ರು ಮತ್ತು ಮೌನೇಶನಾಯಕ ಮುಂತಾದವರು ಉಪಸ್ಥಿತರಿದ್ದರು.

# ಅ.3 ರಂದು ಶ್ರೀರಾಜರಾಜೇಶ್ವರಿಯ ಜಂಬೂಸವಾರಿ ಮೆರವಣಿಗೆ:ಅಯ್ಯಪ್ಪ ತಾತಾ

**ಸಿರವಾರ, ಸೆ.29–** ಹೀರಾ ಗ್ರಾಮದ ಶ್ರೀ ಸಿದ್ರಾಮೇಶ್ವರ ಮಠದಲ್ಲಿ ಕಳೆದ 2 ವರ್ಷಗಳಿಂದ ದಸರಾ ವೈಭವ ಜರುಗಿಸಲಾಗುತ್ತಿದೆ ಈ ವರ್ಷವೂ ದಸಾರ ವೈಭವದ ನಿಮಿತ್ಯ ಶ್ರೀಮಠದ ಶ್ರೀ ರಾಜರಾಜೇಶ್ವರಿಯ ಜಂಬೂಸವಾರಿಯು ಅ.03 ರಂದು ಬೆಳಿಗ್ಗೆ 11 ಗಂಟೆಯಿಂದ ನಡೆಯಲಿದ್ದು ಜಂಬೂಸವಾರಿಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಹಾಗೂ ಮಾನ್ವಿ ಕ್ಷೇತ್ರದ ಜನಪ್ರಿಯ ಶಾಸಕರಾದ ಜಿ.ಹಂಪಯ್ಯ ನಾಯಕ ಅವರು ಚಾಲನೆ ನೀಡಲಿದ್ದಾರೆ, ಶ್ರೀಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀರಾಜರಾಜೇಶ್ವರಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀಮಠದ ಪರಮ ಪೂಜ್ಯ ಶ್ರೀ ಅಯ್ಯಪ್ಪ ತಾತಾನವರು ಹೇಳಿದರು.

ಸೆ.22 ರಿಂದ ಶ್ರೀ ದೇವಿ ಪುರಾಣ ಪ್ರತಿ ದಿನ ಸಾಯಂಕಾಲ 6ರಿಂದ ಪ್ರಾರಂಭವಾಗಿ ರಾತ್ರಿ 9 ಗಂಟೆವರೆಗೆ ಜರುಗಿತ್ತಿದ್ದು ಅ.2 ರಂದ ವಿಜಯದಶಮಿಯಂದು ಸಂಜೆ 5:30ಕ್ಕೆ ಶ್ರೀಮಠದ ಸದ್ಭಕ್ತ ದಾನಿಗಳಿಂದ 108 ಮುತ್ತೈದಿ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ ಜರುಗುವುದು, 6:30ಕ್ಕೆ ಕಳಸೋತ್ಸವ ಮೆರವಣಿಗೆಯೊಂದಿಗೆ ಶ್ರೀ ಬನ್ನಿ ಮಹಾಂಕಾಳಿ ಶಮಿ ಮಹಾ ಪೂಜೆ ಸಕಲ ವಾದ್ಯ ಮೇಳಗಳೊಂದಿಗೆ ನೆರವೇರಿಸಲಾಗುವುದು.

ಅ.3 ರಂದು ಬೆಳಿಗ್ಗೆ 10:30ಕ್ಕೆ 1008 ಮುತ್ತೈದಿ ಸುಮಂಗಲಿಯರಿಗೆ ಶ್ರೀಮಠದ ಸದ್ಭಕ್ತ ದಾನಿಗಳಿಂದ ಉಡಿತುಂಬುವ ಕಾರ್ಯಕ್ರಮ ಜರುಗುವುದು, ನಂತರ 11:00 ಗಂಟೆಗೆ ಶ್ರೀರಾಜರಾಜೇಶ್ವರಿ ಜಂಬೂಸವಾರಿಯು ಸಕಲ ವಾಧ್ಯ ಹಾಗೂ ಕುಂಭ ಕಳಸ, ಡೊಳ್ಳು ಮೇಳಗಳೊಂದಿಗೆ ಭವ್ಯ ಮೆರವಣಿಗೆಯು ಶ್ರೀಮಠದಿಂದ ಲಿಂ: ಪರಮ ಪೂಜ್ಯ ಶ್ರೀಅಯ್ಯಪ್ಪ



ತಾತಾನವರ ಕತೃಗದ್ದುಗೆ ವರೆಗೆ ನಡೆಯುವವುದು.

ದಸರಾ ವೈಭವ ಅಂಗವಾಗಿ ಶ್ರೀಮಠದಿಂದ ಜರುವುದು ಎಲ್ಲಾ ಕಾರ್ಯಕ್ರಮಗಳಲ್ಲಿ ಶ್ರೀಮಠದ ಸದ್ಭಕ್ತರು ಸೇವೆ ಸಲ್ಲಿಸಿ ಶ್ರೀ ರಾಜರಾಜೇಶ್ವರಿಯ ಕೃಪೆಗೆ ಪಾತ್ರರಾಗುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀಮಠದ ಅಯ್ಯಪ್ಪ ತಾತಾ, ಶ್ರೀ ನರಸಣ್ಣ ತಾತಾ, ಮುಖಂಡರಾದ ಹನುಮಂತ್ರಾಯ ಗೌಡ ಪೊಲೀಸ್ ಪಾಟೀಲ್, ಮಾಜಿ ಗ್ರಾ.ಪಂ. ಅಧ್ಯಕ್ಷ ಅಯ್ಯಪ್ಪ ದೊರೆ ಹೀರಾ, ಮಾಜಿ ಗ್ರಾ.ಪಂ. ಅಧ್ಯಕ್ಷರಾದ ಧನಂಜಯ್, ಅಮರೇಶ, ಶಿವರಾಜಪ್ಪ ರಾಯಕುಂಪಿ ಸೇರಿದಂತೆ ಇನ್ನಿತರರು ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111 9743496111

# ರಾಯಚೂರು ಜಿಲ್ಲೆಯಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಗಗೊಳಿಸಿ: ನಿತೀಶ್ ಕೆ

ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.29–**ಕರ್ನಾಟಕ ರಾಜ್ಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವು ಹಿಂದುಳಿದ ವರ್ಗಗಳ ಆಯೋಗದ ಸೂಚನೆಯಂತೆ ವೇಗವಾಗಿ ನಡೆಯಬೇಕು. ರಾಯಚೂರು ಜಿಲ್ಲೆಯಲ್ಲಿ ಸಮೀಕ್ಷಾ ಕಾರ್ಯದಲ್ಲಿ ಭಾಗಿಯಾದ ಎಲ್ಲ ಗಣತಿದಾರರು, ಮೇಲ್ವಿಚಾರಕರು ಚುರುಕಾಗಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಸಂವಾದ ಸಭಾಂಗಣದಲ್ಲಿ ವಿಡಿಯೋ ಸಂವಾದ ನಡೆಸಿ ಅವರು ಮಾತನಾಡಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವು ಈಗಾಗಲೇ ಸೆ.22ರಂದೇ ಆರಂಭವಾಗಿದೆ. ಅಕ್ಟೋಬರ್ 7ರವರೆಗೆ ಸಮೀಕ್ಷಾ ಕಾರ್ಯ ನಡೆಯಲಿದ್ದು, ಈ ಕಾಲಿಮಿತಿಯೊಳಗೆ ಸಮೀಕ್ಷಾ ಕಾರ್ಯವು ಪೂರ್ಣವಾಗಬೇಕು. ಎಲ್ಲ ಗಣತಿದಾರರು ತಮ್ಮ ಕಾರ್ಯದ ಮಹತ್ವ ಅರಿತು ಸಕ್ರಿಯ ಭಾಗಿಯಾಗಬೇಕು. ಮೇಲ್ವಿಚಾರಕರು ಸಹ ಕಾಲಕಾಲಕ್ಕೆ ಗಣತಿದಾರರನ್ನು ಸಂಪರ್ಕಿಸಿ ಮಾರ್ಗದರ್ಶನ ಮಾಡಬೇಕು. ಸಮೀಕ್ಷೆ ಕಡಿಮೆಯಾದ ಕಡೆಗಳಲ್ಲಿ ವೇಗಗೊಳಿಸಬೇಕು. ಗಣತಿದಾರರು ಕ್ಷೇತ್ರ ಕಾರ್ಯದಲ್ಲಿದ್ದ ಬಗ್ಗೆ ಪ್ರತಿ ದಿನ ಬೆಳಗ್ಗೆಯೇ ಮೇಲ್ವಿಚಾರಕರು ಕರೆ ಮಾಡಿ ಖಚಿತಪಡಿಸಿಕೊಳ್ಳಬೇಕು. ಸಮೀಕ್ಷಾ ಹಿನ್ನೆಲೆಯಲ್ಲಿ ಈಗಾಗಲೇ ತರಬೇತಿ ಪಡೆದು ಬಂದಿರುವ ಮಾಸ್ಟರ್ ಟ್ರೇನರಗಳ ಸಹಾಯ ಪಡೆದು,



ಏನಾದರು ತೊಡಕಗಳು ಇದ್ದಲ್ಲಿ ಕೂಡಲೇ ಅದನ್ನು ಸರಿಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಈ ಹಿಂದಿನ ಸಭೆಯಲ್ಲಿ ತಿಳಿಸಿದಂತೆ ನೋಡಲ್ ಅಧಿಕಾರಿಗಳು ಈ ಸಮೀಕ್ಷಾ ಕಾರ್ಯದ ಮೇಲ್ವಿಚಾರಣೆ ನಡೆಸಬೇಕು. ಎಲ್ಲಾ ತಾಲೂಕುಗಳಲ್ಲಿ ಸಮೀಕ್ಷಾ ಕಾರ್ಯದ ಪ್ರಗತಿಯು ಏಕಕಾಲಕ್ಕೆ ಆಗಬೇಕು. ಆಯಾ ತಾಲೂಕಿನ ಸಮೀಕ್ಷಾ ಕಾರ್ಯದ ಬಗ್ಗೆ ಪ್ರತಿ ದಿನ ವರದಿ ಮಾಡಬೇಕು ಎಂದು ಸೂಚನೆ ನೀಡಿದರು.

ವಿಡಿಯೋ ಸಂವಾದದಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಈಶ್ವರ್ ಕಾಂದೂ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ಬಸವಣೆಪ್ಪ ಕಲಶಟ್ಟಿ, ತಹಸೀಲ್ದಾರ ಸುರೇಶ ವರ್ಮಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಸುನೀತಾ ಘಟಕಾಂಬಳೆ ಸೇರಿದಂತೆ ಇನ್ನೀತರ ಇಲಾಖೆಯ ಅಧಿಕಾರಿಗಳು ಇದ್ದರು.

## ಜಿಲ್ಲೆಯಲ್ಲಿ ಸೂರ್ಯಕಾಂತಿ ಉತ್ಪನ್ನಗಳ ಖರೀದಿ ಕೇಂದ್ರಗಳ ಸ್ಥಾಪನೆ: ಕೆ ನಿತೀಶ್

**ರಾಯಚೂರು,ಸೆ.29–**ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿನಲ್ಲಿ ಎಫ್.ಎ.ಕ್ಯೂ. ಗುಣಮಟ್ಟದ ಮುಂಗಾರು ಹಂಗಾಮಿನ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸರ್ಕಾರದ ಈ ಯೋಜನೆಯ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿಗೆ ರೈತರಿಂದ ಮುಂಗಾರು ಹಂಗಾಮಿನ ಸೂರ್ಯಕಾಂತಿ ಉತ್ಪನ್ನವನ್ನು ಪ್ರತಿ ಎಕರಿಗೆ 4.00 ಕ್ವಿಂಟಾಲ್ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್‌ಗೆ 7,721 ರೂ.ಗಳಂತೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾಗುವುದು.

ಸೆಪ್ಟೆಂಬರ್ 26 ರಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳವರೆಗೆ ನಿಗಧಿಪಡಿಸಿದೆ. ರೈತರಿಂದ ಸೂರ್ಯಕಾಂತಿಯನ್ನು ಖರೀದಿಸುವ ಸಂಬಂಧ ರಾಯಚೂರು ತಾಲೂಕಿನ ಹುಣಸಿಹಾಳಹುಡಾ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 9743695467, ಸಿಂಧನೂರು ತಾಲೂಕಿನ ಜವಳಗೇರಾ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ:. 9964165509, ಹುಡಾ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 9964315868, ಲಿಂಗಸಗೂರು ತಾಲೂಕಿನ ಮಟ್ಟೂರು ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 7337773317, ಮೆದಕಿನಾಳ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 9663704921, ಲಿಂಗಸುಗೂರು ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 7483685720, ಮಾನವಿ ತಾಲೂಕಿನ ತೋರಣದಿನ್ನಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 9902387316, ದೇವದುರ್ಗ ತಾಲೂಕಿನ ಜಾಲಹಳ್ಳಿ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 7899312989, ಸಿರವಾರ ತಾಲೂಕಿನ ಸಿರವಾರ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘದ ಮೊಬೈಲ್ ಸಂಖ್ಯೆ: 9880891919 ಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರ ಬಾಂಧವರು ಫ್ರೂಟ್ಸ್ ಐ.ಡಿ ಯೊಂದಿಗೆ ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಿ ಸೂರ್ಯಕಾಂತಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪರಿಡಿಸಕೊಳ್ಳಲು ಜಿಲ್ಲೆಯ ರೈತ ಬಾಂಧವರಲ್ಲಿ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಸದುವಿನಯವೇ ಸದಾಶಿವನೊಲುಮೆ

**ಕಲಬುರಗಿ,ಸೆ.29–**ಹಸುವಿನ ಹಾಲು ಹಿಂಡಲು ಅದರ ಕಾಲ ಹತ್ತಿರ ಕೆಳಗಡೆ ಕುಳಿತುಕೊಳ್ಳಬೇಕಾಗುತ್ತದೆ. ನಾವು ಹಸುವಿಗೆ ವಿನಯಶೀಲತೆ ತೋರಿಸಿದಾಗ ಮಾತ್ರ ಅದು ಹಾಲು ನೀಡುತ್ತದೆ . ಹಸುವಿನ ಹಾಲು ಪಡಿಯಲು ಅಹಂಕಾರದಿಂದ ಹಸುವಿನ ಮೇಲೆ ಕುಳಿತರೆ ಹಾಲು ದೊರೆಯುವುದಿಲ್ಲ .ಶರಣರ ಪಾದಕ್ಕೆ ವಿನಯಶೀಲರಾಗಿರಬೇಕು ಆಗ ಮಾತ್ರ ನಾವು ಅಧ್ಯಾತ್ಮ ಸಾಧನೆ ಮಾಡಲು ಸಾಧ್ಯವಾಗುತ್ತದೆ . ಪಾರಮಾರ್ಥ ದೊರಕುತ್ತದೆ . ಶರಣ ಸಂಕುಲಕ್ಕೆ ಕಿಂಕರರಾಗಿರಬೇಕು . ಎನಗಿಂತ ಕಿರಿಯರಿಲ್ಲ ಶರಣರಿಗಿಂತ ಹಿರಿಯರಿಲ್ಲ ಎಂಬ ಸದುವಿನಯ ಬೆಳೆಸಿಕೊಳ್ಳಬೇಕು. ದೇವರು ಎಲ್ಲಾ ಭಕ್ತರಿಗೆ ಪರಿಚಿತನಾಗಿರುತ್ತಾನೆ , ನಿಜವಾದ ಭಕ್ತನಿಗೆ ದೇವರು ಕೂಡ ಗುರುತು ಹಿಡಿಯುತ್ತಾನೆ ಎಂದು ಜಯಶ್ರೀ ಚಟ್ನಳ್ಳಿ ಹೇಳಿದರು.

ಬಸವ ಸಮಿತಿಯ ಅನುಭವ ಮಂಟಪದಲ್ಲಿ ಲಿಂ.ಬಸವರಾಜ ಸಗರ ಸ್ಮರಣಾರ್ಥ ಜರುಗಿದ 869ನೇ ದತ್ತಿ ಕಾರ್ಯಕ್ರಮದಲ್ಲಿ ಶರಣರ ಪಾದಕ್ಕೆ ಕೀಳಾಗಿರಿಸು ಎಂಬ ವಿಷಯದ ಕುರಿತು ಮಾತನಾಡಿದ ಅವರು,

ಪಂಚಭೂತಗಳಿಂದ ಆತ್ಮ ಅಂಗನಾದ ,ಅಂಗನು ವಿನಯಗುಣ ಬೆಳೆಸಿಕೊಂಡು ಲಿಂಗವಾಗಬೇಕು . ಅಹಂಕಾರ ಅಳಿಯಬೇಕು ವಿನಯ ಗುಣ ಬೆಳೆಯಬೇಕು . ಮೂಲದಲ್ಲಿ ಶರಣನಿದ್ದವನು ಕಲ್ಮಶಗಳು ಬಂದು ಮಾನವನಾಗುತ್ತಾನೆ .

## ಅ.4ರಂದು ಮ್ಯಾನ್ಯುಯಲ್ ಸ್ಕ್ಯಾವೆಂಜರ್, ಸಫಾಯಿ ಕರ್ಮಚಾರಿಗಳ ಸಭೆ

**ರಾಯಚೂರು,ಸೆ.29** ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮದಡಿ ರಚಿತವಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ/ ಸಫಾಯಿ ಕರ್ಮಚಾರಿಗಳ ಸಭೆಯು ಅಕ್ಟೋಬರ್ 4ರಂದು ಮಧ್ಯಾಹ್ನ 12 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯಲ್ಲಿ ಜನಪ್ರತಿನಿಧಿಗಳು ಉಪಸ್ಥಿತರಿರುವರು. ಜೊತೆಗೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಸಭೆಗೆ ಆಗಮಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅ.04ರಂದು ದೌರ್ಜನ್ಯ ನಿಯಂತ್ರಣ ಸಭೆ

**ರಾಯಚೂರು,ಸೆ.29–**ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ದೌರ್ಜನ್ಯ ನಿಯಂತ್ರಣ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಮೇಲುಸ್ತುವಾರಿ ಸಮಿತಿ ಸಭೆಯು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 04ರ ಬೆಳಿಗ್ಗೆ 11 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆಯಲಿದೆ. ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಹಾಜರಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಈಚನಾಳ :ಕಾಳಿಕಾ ದೇವಿ ಗದ್ದುಗೆಗೆ ರುದ್ರಾಭಿಷೇಕ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.29–** ತಾಲೂಕಿನ ಈಚನಾಳ ಗ್ರಾಮದಲ್ಲಿ ಮಹಾನವಮಿ ಹಬ್ಬದ ಪ್ರಯುಕ್ತ ಕಾಳಿಕಾ ದೇವಿ ಗದ್ದುಗೆಗೆ ಪೇಠಾ ಅಮ್ಮಾ ಪುರ ಶ್ರೀಮಠದ ರಾಮ ಶರಣರು ಸ್ವಾಮೀಜಿಯವರ ನೇತೃತ್ವದಲ್ಲಿ ರುದ್ರಾಭಿಷೇಕ ನೆರವೇರಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಈಚನಾಳ ಗ್ರಾಮದಲ್ಲಿ ಮಂಟೂರಿನ ರಾಮಲಿಂಗೇಶ್ವರ ಶರಣರು, ಪ್ರತಿಷ್ಠಾಪಿಸಿದ ಕಾಳಿಕಾ ದೇವಿಗೆ ರುದ್ರಾಭಿಷೇಕ ನಡೆಸಿ,ಐದು ಜನ ಮುತ್ತೈದೆಯರಿಗೆ ಉಡಿ ತುಂಬಿ ,ಅನ್ನ ಸಂತರ್ಪಣೆ ಸೇವೆ ನಡೆಸಲಾಯಿತು.

ಈ ವೇಳೆ ಅಮ್ಮಾಪುರದ ರಾಮಶರಣರು ಸ್ವಾಮೀಜಿ ಹಾಗೂ ಹೊನ್ನಳ್ಳಿಯ ಅಪ್ಪಾಜೀ ಸ್ವಾಮೀಜಿ ಯವರಿಗೆ ಸನ್ಮಾನಿಸಿ ಸತ್ಕರಿಸಲಾಯಿತು.

ಈ ಸಂಧರ್ಭದಲ್ಲಿ ಚನ್ನಯ್ಯ ಸ್ವಾಮಿ, ಅಮರಯ್ಯ ಸ್ವಾಮಿ,ಗುಂಡಪ್ಪ ಗೌಡ ಗಡ್ಡಿ, ಶಿವಪ್ಪ ಹೊಟೇಲ್, ಅಪ್ಪಾಜಿ ಸ್ವಾಮಿ ಹೊನ್ನಳ್ಳಿ, ಶ್ರೀಮಂತ ಜೀನೂರ, ವೀರಭದ್ರಪ್ಪ ಮರಳಿ, ಬಸಪ್ಪ ಚಲುವಾದಿ ,ಹನುಮಂತ ವಾಗಣೀಗೇರಿ, ಬಸವರಾಜ ಪೇಠಾ ಅಮ್ಮಾಪುರ, ಯಮನೂರಪ್ಪ ಹೊನ್ನಳ್ಳಿ,ದೇವರೆಡ್ಡಿ ಮೇಟಿ, ನಾಗಲಿಂಗಪ್ಪ ಬಡಿಗೇರ್,ಡಾ.ಮಹೇಶ ಪಶು ವೈದ್ಯರು,ಬಸನಗೌಡ ನಾಗೂರ ,ಶರಣಪ್ಪ ಕುಂಬಾರ,ಸೇರಿದಂತೆ ಗ್ರಾಮಸ್ಥರು ಇದ್ದರು.

## ನೇಣು ಹಾಕಿಕೊಂಡು ವೃದ್ಧ ಆತ್ಮಹತ್ಯೆ

**ಕಲಬುರಗಿ,ಸೆ.29–**ನೇಣು ಹಾಕಿಕೊಂಡು ವೃದ್ಧರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಟಿಪ್ಪು ಚೌಕ್‌ನ ಅಕ್ಬರ್ ಭಾಗ್ ಕಾಲೋನಿಯಲ್ಲಿ ನಡೆದಿದೆ.

ನಹೀಮ್ ಪಾಶಾ (71) ಎಂಬುವವರೆ ಮನೆಯಲ್ಲಿನ ಫ್ಯಾನಿಗೆ ಬೆಡ್‌ಶೀಟ್‌ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂ ಡಿದ್ದಾರೆ ಎಂದು ತಿಳಿದುಬಂದಿದೆ.

ಈ ಸಂಬಂಧ ಅವರ ಸಹೋದರ ಅಬ್ದುಲ್ ಸಲೀಮ್ ಅವರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

# ಶ್ರೀ ವೆಂಕಟೇಶ್ವರ ಶಿಕ್ಷಣ ಸಂಸ್ಥೆಗೆ 'ಅಕ್ಷರ ದಾಸೋಹಿ' ಪ್ರಶಸ್ತಿ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.29**–ತಾಲೂಕಿನ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿ ಒಕ್ಕೂಟ ಹಾಗೂ ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘದ ವತಿಯಿಂದ ಇತ್ತೀಚಿಗೆ ನಡೆದ ಸಮಾರಂಭದಲ್ಲಿ ಶ್ರೀವೆಂಕಟೇಶ್ವರ ಶಿಕ್ಷಣ ಸಂಸ್ಥೆಗೆ 'ಅಕ್ಷರ ದಾಸೋಹಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಈ ಶಿಕ್ಷಣ ಸಂಸ್ಥೆಯು 2004–05ರಲ್ಲಿ ದಿವಂಗತ ಶ್ರೀ ಫಕೀರಪ್ಪ ಓಲೇಕಾರ ಅವರ ಮುಂದಾಳತ್ವದಲ್ಲಿ ಮತ್ತು ಅವರ ಧರ್ಮಪತ್ನಿಂಯಾದ ಶ್ರೀಮತಿ ಮುದಕಮ್ಮ ಓಲೇಕಾರ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಕಂದಾಯ ನಿರೀಕ್ಷಕರಾಗಿ ನಿವೃತ್ತಿ ಹೊಂದಿದ್ದ ಶ್ರೀ ಫಕೀರಪ್ಪ ಓಲೇಕಾರ ಅವರು ತಮ್ಮ ನಿವೃತ್ತ ಜೀವನದಲ್ಲಿ ಮಾನ್ವಿ ಪಟ್ಟಣ ಹಾಗೂ ಸುತ್ತಮುತ್ತಲಿನ ಹಳ್ಳಿಯ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಈ ಸಂಸ್ಥೆಯನ್ನು ಹುಟ್ಟುಹಾಕಿದರು. ಅವರು ಒಬ್ಬ ಕ್ರಿಯಾಶೀಲ, ಶಿಕ್ಷಣ ಪ್ರೇಮಿ ಹಾಗೂ ಅತ್ಯಂತ ಚಟುವಟಿಕೆಯಿಂದ ಕೂಡಿದ ವ್ಯಕ್ತಿಗಳಾಗಿದ್ದರು.

ಅದೇ 2004–05ನೇ ಸಾಲಿನಲ್ಲಿ ಕೇವಲ ಎಂಟು ವಿದ್ಯಾರ್ಥಿಗಳಿಂದ ಸ್ವಂತ ಮನೆಯ ಮೇಲೆ ಶ್ರೀ ವೆಂಕಟೇಶ್ವರ ಪ್ರೌಢಶಾಲೆ ಪ್ರಾರಂಭವಾಯಿತು. ಶ್ರೀ ಫಕೀರಪ್ಪ ಓಲೇಕಾರ ಅವರ ಶ್ರಮ ಹಾಗೂ ಅವರ ಜೇಷ್ಠ ಸುಪುತ್ರರಾದ ಶ್ರೀ ಮಹಾಂತೇಶ ಓಲೇಕಾರ ಅವರ ನಿರ್ದೇಶನದಲ್ಲಿ ಸಂಸ್ಥೆಯು ಹಂತ ಹಂತವಾಗಿ ಬೆಳೆಯಿತು. 2007–08 ರಲ್ಲಿ ವೆಂಕಟೇಶ್ವರ ಪ್ರಾಥಮಿಕ ಶಾಲೆ, 2009–10 ರಲ್ಲಿ ಶ್ರೀ ಫಕೀರಪ್ಪ ಓಲೇಕಾರ ಅವರ ಅಣ್ಣನವರ ಸ್ಮರಣಾರ್ಥವಾಗಿ ಶ್ರೀ ಮೈಲಾರಪ್ಪ ವೆಂಕಪ್ಪ ಓಲೇಕಾರ ಪದವಿ ಪೂರ್ವ ಕಾಲೇಜು ಹಾಗೂ 2014–15 ರಲ್ಲಿ ವೆಂಕಟೇಶ್ವರ ಪದವಿ ಮಹಾವಿದ್ಯಾಲಯ ಪ್ರಾರಂಭವಾಯಿತು.

ಸಂಸ್ಥೆಯು ಸಾಧನೆ ಮತ್ತು ಒಳಿತಿಗಾಗಿ ಪ್ರಸ್ತುತ ಅಧ್ಯಕ್ಷರಾದ ಶ್ರೀ ಮಹಾಂತೇಶ ಓಲೇಕಾರ ರವರು ಶ್ರೀ ಫಕೀರಪ್ಪ ಓಲೇಕಾರ ರವರ ಜೊತೆಗೂಡಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತಾರೆ.



ಮಾನ್ವಿ: ಪಟ್ಟಣದ ಶ್ರೀ ಕನ್ನಿಕ ಪರಮೇಶ್ವರಿ ದೇವಸ್ಥಾನದಲ್ಲಿ ದಸರಾ ಹಬ್ಬದ ಅಂಗವಾಗಿ ಶ್ರೀ ಕನ್ನಿಕ ಪರಮೇಶ್ವರಿ ಅಮ್ಮನವರಿಗೆ ಸರಸ್ವತಿ ದೇವಿಯ ಅಲಂಕಾರ ಮಾಡಲಾಯಿತು, ಆರ್ಯವೈಶ್ಯ ಮಹಿಳಾ ಮಂಡಳಿಯ ಮಹಿಳಾ ಸದಸ್ಯರಿಂದ ದಸರಾ ಅಂಗವಾಗಿ ವಿವಿಧ ಪೂಜೆಗಳನ್ನು ನೆರವೇರಿಸಿದರು ಹಾಗೂ ಕೋಲಾಟ, ನೃತ್ಯಗಳ ಮೂಲಕ ಆನಂದಿಸಿದರು.

# ಹತ್ತಿ ಮತ್ತು ಜೋಳದ ಬೆಳೆ ನಾಶ ಹಾನಿಗೊಳಗಾದ ಜಮೀನುಗಳಿಗೆ ಭೇಟಿ ನೀಡಿದ ಮಾಜಿ ಶಾಸಕ ರಾಜಾವೆಂಕಟಪ್ಪ ನಾಯಕ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.29**– ತಾಲೂಕಿನ ಹಿರೇಕೊಟ್ನೆಕಲ್, ಪೋತ್ನಾಳ್, ಜೇನೂರು, ತಡಕಲ್ ಸೇರಿದಂತೆ ಹಲವು ಗ್ರಾಮಗಳಲ್ಲಿ ಅತಿವೃಷ್ಟಿಯಿಂದ ಹತ್ತಿ ಮತ್ತು ಜೋಳದ ಬೆಳೆಗಳಿಗೆ ಭಾರೀ ಹಾನಿ ಸಂಭವಿಸಿದೆ. ಹಾನಿಗೊಳಗಾದ ಜಮೀನುಗಳಿಗೆ ಇಂದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಭೇಟಿ ನೀಡಿ, ರೈತರ ದುಸ್ಥಿತಿಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ರೈತರು ಯಾವುದೇ ಕಾರಣಕ್ಕೂ ಭಯ ಪಡುವ ಅಗತ್ಯವಿಲ್ಲ. ನಾನು ಸದಾ ನಿಮ್ಮೊಂದಿಗಿದ್ದೇನೆ. ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ನಾನು ಆಗ್ರಹಿಸುತ್ತೇನೆ" ಎಂದು ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ರಾಜ್ಯ ಯುವ ಘಟಕದ ಉಪಾಧ್ಯಕ್ಷ ರಾಜಾ ರಾಮಚಂದ್ರ ನಾಯಕ, ರೈತ ಘಟಕದ ಅಧ್ಯಕ್ಷ ಶರಣಪ್ಪ ಗೌಡ ಮದ್ಲಾಪೂರ, ತಾಲೂಕು ವಕ್ತಾರ ನಾಗರಾಜ್ ಬೋಗಾವತಿ, ನಗರ ಜೆಡಿಎಸ್ ಅಧ್ಯಕ್ಷ ಹೆಜ್.ಮೌನೇಶ್ ಗೌಡ, ತಾಲೂಕು ಹಿಂದುಳಿದ ವರ್ಗದ ಅಧ್ಯಕ್ಷ ಲಕ್ಷ್ಮಣ ಯಾದವ್, ಎಸ್.ಟಿ. ಘಟಕದ ಅಧ್ಯಕ್ಷ ವಿಜಯ್ ನಾಯಕ, ಸೇರಿದಂತೆ ಹಲವಾರು ಮುಖಂಡರು, ಕಾರ್ಯಕರ್ತರು ಮತ್ತು ರೈತರು ಪಾಲ್ಗೊಂಡಿದ್ದರು.

# ಸಾರ್ಥಕ ಜೀವನ ಗ್ರಂಥ ಲೋಕಾರ್ಪಣೆ



**ಕಲಬುರಗಿ,ಸೆ.29**–ಸೊನ್ನದ ಶ್ರೀಮಠದಲ್ಲಿ ಶಿಕ್ಷಣ ದಾಸೋಹ ಮಾಡುವಲ್ಲಿ ಗಣಜಲಖೇಡ ಅವರ ಕೊಡುಗೆ ಅಪಾರ. ಅವರೊಬ್ಬ ಸಾಮಾಜಿಕ,ಶೈಕ್ಷಣಿಕದ ಜೊತೆಗೆ ತಮ್ಮ ವೃತ್ತಿ ಗೌರವಕ್ಕೆ ಕಳೆ ತಂದ ಆದರ್ಶ ವ್ಯಕ್ತಿ ಅದೇ ದಾರಿಯಲ್ಲಿ ಅವರ ಮಕ್ಕಳು ನಡೆಯುತ್ತಿರುವುದು ಸಂತಸದ ಸಂಗತಿ ಎಂದು ಸೊನ್ನ ಮಠದ ಪೀಠಾಧಿಪತಿ ಡಾ.ಶಿವಾನಂದ ಮಹಾಸ್ವಾಮಿಗಳು ಅಭಿಮತ ವ್ಯಕ್ತಪಡಿಸಿದರು.

ವೀರಶೈವ ಕಲ್ಯಾಣ ಮಂಟಪದಲ್ಲಿ ಗಣಜಲಖೇಡ ಪರಿವಾರ ಮತ್ತು ಅಭಿಮಾನಿ ಬಳಗ ಏರ್ಪಡಿಸಿದ ಲಿಂ.ನಾಗಣ್ಣ ಗಣಜಲಖೇಡ ಅವರ ಪ್ರಥಮ ಪುಣ್ಯ ಸ್ಮರಣೆ ನಿಮಿತ್ಯ ಹಿರಿಯ ಸಾಹಿತಿ ಎಚ್.ಕಾಶೀನಾಥ ರೆಡ್ಡಿ ಸಂಪಾದಿಸಿದ ಸಾರ್ಥಕ ಜೀವನ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಆಶೀರ್ವಚನ ನೀಡಿ ಸಮಾಜಕ್ಕೆ ಇಂತಹ ವ್ಯಕ್ತಿಗಳು ಯಾವಾಗಲು ಆದರ್ಶವೆಂದರು.

ದಕ್ಷಿಣ ಮತ ಕ್ಷೇತ್ರದ ಕಲಬುರಗಿ ಶಾಸಕ ಅಲ್ಲಮಪ್ರಭು ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ನಮ್ಮ ನಾಗಣ್ಣನವರ ಒಡನಾಟ ಇದೆ.ಅವರು ಸರಕಾರಿ ನೌಕರರ ಸಂಘದ ಕಟ್ಟಡಕ್ಕೆ ಸಹಾಯ ಮಾಡಿದ್ದೇವೆ.ಅನೇಕರಿಗೆ ಅವರು ನೌಕರಿ ಕೊಟ್ಟ ಮಹಾತ್ಮ ಎಂದರು.

ನಾಗಣ್ಣನವರ ಬದುಕು ತನಗಾಗಿ ಅಲ್ಲ ಇತರರಿಗೆ ಮಾಡಿದ ಬಾಳಿದ್ದು ಅವರ ಆದರ್ಶ ಎಂದು ಸಾರಂಗಧರ– ಸುಲಫಲ ಮಠದ ಡಾ.ಸಾರಂಗಧರ ಮಹಾಸ್ವಾಮಿಗಳು ನುಡಿದರು.

ಅಧ್ಯಕ್ಷತೆ ವಹಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣಿ ಮಾತನಾಡಿ ನಮ್ಮದು ಸ್ನೇಹಕ್ಕಿಂತ ಮಿಗಿಲಾದ ಸಂಬಂಧ

ಅವರೊಂದಿಗಿನ ಅನನ್ಯತೆ ಅಪಾರ ಎಂದರು.

ಪ್ರಾಸ್ತಾವಿಕ ನುಡಿ ಆಡಿದ ಸಾಹಿತಿ ಡಾ.ಗವಿಸಿದ್ದಪ್ಪ ಪಾಟೀಲ ಅವರು ಸಾರ್ಥಕ ಜೀವನ ಗ್ರಂಥದಲ್ಲಿ 330 ಪುಟಗಳು ಹೊಂದಿದೆ.ಮೂರು ಭಾಗದಲ್ಲಿ ಕಳ್ಳುಬಳ್ಳಿಯಲ್ಲಿ ಎಂಟು ಲೇಖನ,ಎಪ್ಪತ್ತೆರಡು ಲೇಖನಗಳು ಭಾಗ ಮೂರರಲ್ಲಿ ತೆರೆದ ಬದುಕು ಗಣಜಲಖೇಡ ಅವರ ಆತ್ಮಕಥೆ ಮೂಡಿದೆ.ಅವರ ಚಿತ್ರ ಸಂಪುಟ ಹೊಂದಿದೆ.ಹಾಗೇ ಅವರು ಎಂಬತ್ತೊಂದು ವರ್ಷ ಕಾಲ ಬಾಳಿ ಬದುಕಿದ ಸಾವಿರಾರು ಮಹಿಳೆಯರ ಬಾಳಿಗೆ ಆಶಾ ಕಿರಣವಾದವರು ಎಂದರು.ಇದೇ ಸಂದರ್ಭದಲ್ಲಿ ನೃಪತುಂಗ ಪತ್ರಿಕೆ ಸಂಪಾದಕ ಶಿವರಾಯ ದೊಡ್ಡಮನಿ, ಡಾ.ಶಿವಪುತ್ರ ಹರವಾಳ,ಓತಿ ಶರಣಪ್ಪ,ಎ.ಎಂ.ಪಾಟೀಲತಮ್ಮ ಅನಿಸಿಕೆ ವ್ಯಕ್ತಪಡಿಸಿದರು.



ಮಾನ್ವಿ: ಪಟ್ಟಣದ ಕಲ್ಮಠದಲ್ಲಿ ಪ್ರತಿವರ್ಷದಂತೆ ದಸರಾ ಹಬ್ಬದ ಅಂಗವಾಗಿ ಬಾಲ ಮುತ್ತೈದೆಯರಿಗೆ ಸುಮಂಗಲಿಯರಿಂದ ಪಾದ ಪೂಜೆಮಾಡಿ ಆರತಿ ಬೆಳಗಲಾಯಿತು. ನೂರಾರು ಮಕ್ಕಳು ಸೀರೆಯನ್ನುಟ್ಟು ಕೊಂಡು ತಮ್ಮ ಪಾಲಕರೊಂದಿಗೆ ಸಂಭ್ರಮದಿಂದ ಭಾಗವಹಿಸಿದರು

# ತಾಂತ್ರಿಕ ಸಮಸ್ಯೆಗಳ ಮಧ್ಯೆ ಜಾತಿ ಗಣತಿ ಪೂರ್ಣ ತಾಲೂಕು ಆಡಳಿತದಿಂದ ಗುರುಮೂರ್ತಿಗೆ ಸನ್ಮಾನ



ಯುವ ಮಾರ್ಗ ಸುದ್ದಿ

**ಸಿರವಾರ, ಸೆ.29**–ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಜಾತಿ ಗಣತಿ ಕಾರ್ಯದಲ್ಲಿ ಸಿರವಾರ ತಾಲೂಕಿನ ಚಾಗಭಾವಿ ಗ್ರಾಮದ ಶಿಕ್ಷಕ ಗುರುಮೂರ್ತಿ ಎಂ.ಜಿ ಅವರು ಜಾತಿ ಗಣತಿ ಸಮೀಕ್ಷೆಗೆ ಅನೇಕ ತಾಂತ್ರಿಕ ಸಮಸ್ಯೆಗಳ ನಡುವೆಯೇ ನಿಗದಿತ ಅವಧಿಗೆ ಮೊದಲು ಸಾಮಾಜಿಕ ಹಾಗೂ ಜಾತಿ ಗಣತಿ ಕಾರ್ಯ ಪೂರ್ಣಗೊಳಿಸುವ ಮೂಲಕ ಕಲ್ಯಾಣ ಕರ್ನಾಟಕ ಹಾಗೂ ರಾಯಚೂರು ಜಿಲ್ಲೆಯಲ್ಲೇ ಪ್ರಥಮ ಶಿಕ್ಷಕ ಎಂಬ ಹೆಗ್ಗಳಿಗೆ ಪಾತ್ರರಾಗಿದ್ದಾರೆ ಇವರ ಕಾರ್ಯವನ್ನು ಶ್ಲಾಘಿಸಿ ಸಿರವಾರ ತಾಲೂಕು ಆಡಳಿತದ ವತಿಯಿಂದ ತಹಸೀಲ್ದಾರ್ ಅಶೋಕ ಪವಾರ್ ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಆರೀಫ್ ಮಿಯಾ ಚಾಗಭಾವಿ ಅವರು ಗುರುಮೂರ್ತಿ ಎಂ.ಜಿ ಅವರನ್ನು ಶನಿವಾರ ಸಂಜೆ ಪಟ್ಟಣದ ತಹಸೀಲ್ ಕಾರ್ಯಾಲಯದಲ್ಲಿ ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ಪಿ.ಎಸ್.ಐ ವೆಂಕಟೇಶ ನಾಯಕ ಅವರು ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಸಾಮಾಜಿಕ, ಶೈಕ್ಷಣಿಕ ಜಾತಿ ಗಣತಿ ಕಾರ್ಯ ನಡೆಯುತ್ತಿದೆ ಸರ್ವರ್ ಹಾಗೂ ಇನ್ನಿತರೆ ತಾಂತ್ರಿಕ ಸಮಸ್ಯೆಗಳು ಕಂಡುಬಂದಿವೆ ಅದರ ಮಧ್ಯೆಯೇ ಗುರುಮೂರ್ತಿ ಅವರು ಶೇ 100 ರಷ್ಟು ಗುರಿ ಮುಟ್ಟಿದ್ದಾರೆ ಇದು ಇಡೀ ರಾಜ್ಯದಲ್ಲೇ ಪ್ರಥಮ ಇರಬಹುದು ಅನಿಸುತ್ತೆ ಆದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಇವರೇ ಗಣತಿ ಕಾರ್ಯ ಪೂರ್ಣ ಮಾಡಿದ ಪ್ರಥಮ ಶಿಕ್ಷಕರಾಗಿದ್ದಾರೆ ಇನ್ನೂ ಎಲ್ಲಾ ಗಣತಿದಾರರು ಸರ್ಕಾರ ನಿಗದಿಪಡಿಸಿದ ಅವಧಿಯಲ್ಲಿ ಜಾತಿ ಗಣತಿ ಸಮೀಕ್ಷೆಯ ಕಾರ್ಯ ಪೂರ್ಣ ಮಾಡಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ಸಾಮಾಜಿಕ, ಶೈಕ್ಷಣಿಕ ಜಾತಿ ಗಣತಿಯ ಜಿಲ್ಲಾ ಮಾಸ್ಟರ್ ಟ್ರೈನರ್ ಗುರು ಹಿರೇಮಠ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಜಾವೀದ್ ಪಾಷ, ಜಿಪಿಟಿ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಸವರಾಜ, ಸಿ.ಆರ್.ಪಿಗಳಾದ ಮಹೇಶ, ವೆಂಕಟೇಶ, ಶಿಕ್ಷಕರಾದ ಚನ್ನವೀರಯ್ಯಸ್ವಾಮಿ, ಅಕ್ಷಯ್, ಅಮರೇಶ ಇದ್ದರು.

# ದೊಡ್ಡ ನಿವೇಶನಕ್ಕೂ ಒಸಿ, ಸಿಸಿ ರಿಯಾಯ್ತಿ ನಿರ್ಧಾರ ಸಾಧ್ಯತೆ



**ಬೆಂಗಳೂರು, ಸೆ. 29**– ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹಾಗೂ ರಾಜ್ಯದ ವಿವಿಧೆಡೆ ದೊಡ್ಡ ನಿವೇಶನಗಳಲ್ಲಿ ನಕ್ಷೆ ಅನುಮೋದನೆ ಪಡೆಯದೆ ಹಾಗೂ ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸುವಲ್ಲಿ ಆಗಿರುವ ತೊಡಕುಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮಹತ್ವದ ಸಭೆ ನಡೆಸಿದ್ದು, ದೊಡ್ಡ ನಿವೇಶನಗಳಲ್ಲೂ ನಿರ್ಮಿಸಿರುವ ಕಟ್ಟಡಗಳಿಗೆ ಓಸಿ, ಸಿಸಿಯಿಂದ ರಿಯಾಯ್ತಿ ನೀಡುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ.

ನಕ್ಷೆ ಪಡೆಯದೆ ಹಾಗೂ ನಕ್ಷೆ ಉಲ್ಲಂಘಿಸಿ 30ಥ40 ಅಳತೆಯ ನಿವೇಶನಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಓಸಿ, ಸಿಸಿಯಿಂದ ಸರ್ಕಾರ ರಿಯಾಯ್ತಿ ನೀಡಿದೆ. ಆದರೆ ದೊಡ್ಡ ನಿವೇಶನಗಳಲ್ಲೂ ಲಕ್ಷಾಂತರ ಮಂದಿ ಕಟ್ಟಡಗಳನ್ನು ನಿರ್ಮಿಸಿದ್ದು, ಇವರಿಗೂ ಒಂದು ಬಾರಿ ರಿಯಾಯ್ತಿ ನೀಡಬೇಕು ಎಂಬ ಮನವಿಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದ್ದು, ದೊಡ್ಡ ನಿವೇಶನಗಳಿಗೂ ಒಂದು ಬಾರಿ ಓಸಿ, ಸಿಸಿಯಿಂದ ವಿನಾಯ್ತಿ ನೀಡುವ ಬಗ್ಗೆ ಚರ್ಚೆಗಳು ನಡೆದು ಇದಕ್ಕೆ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಈಗಾಗಲೇ 30ಥ40 ನಿವೇಶನ ಅಳತೆಗಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಅನ್ವಯಿಸುವಂತೆ ದಂಡ ವಿಧಿಸಿ ಓಸಿ, ಸಿಸಿಯಿಂದ ವಿನಾಯ್ತಿ ನೀಡುವ ಬಗ್ಗೆಯೂ ಈ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ.

ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಈ ಸಭೆಯಲ್ಲಿ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಲ್ಪಿಸುವಲ್ಲಿ ಇರುವ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ ಮಾರ್ಗೋಪಾಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ದೊಡ್ಡ ನಿವೇಶನಗಳಲ್ಲೂ ನಿರ್ಮಿಸಿರುವ ಕಟ್ಟಡಗಳಿಗೆ ಓಸಿ, ಸಿಸಿಯಿಂದ ರಿಯಾಯ್ತಿ ನೀಡುವ ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಪೌರಾಡಳಿತ ಸಚಿವ ರಹೀಂ ಖಾನ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಹಿರಿಯ ಅಧಿಕಾರಿಗಳಾದ ತುಷಾರ್ ಗಿರಿನಾಥ್, ಪಂಕಜ್‌ಕುಮಾರ್ ಪಾಂಡೆ ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿದ್ದರು.

# ನಕಲಿ ಎಸ್.ಟಿ ಪ್ರಮಾಣ ಪತ್ರ ಪಡೆದವರ ಮೇಲೆ ಕ್ರಮ: ಸಚಿವರ ಭರವಸೆ

ಯುವ ಮಾರ್ಗ ಸುದ್ದಿ

**ಕಲಬುರಗಿ,ಸೆ.29–**ನಗರದ ವಿಮಾನದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆಯವರನ್ನು ಹೈದರಾಬಾದ್ ಕರ್ನಾಟಕ ಪ್ರದೇಶದ ವಾಲ್ಮೀಕಿ ನಾಯಕ ಸಂಘದ ನೇತೃತ್ವದಲ್ಲಿ ವಾಲ್ಮೀಕಿ ನಾಯಕ ಸಮಾಜದ ಮುಖಂಡರು ಹಾಗೂ ಯವ ನಾಯಕರು ಭೇಟಿಯಾಗಿ ನಕಲಿ ಎಸ್.ಟಿ ಪ್ರಮಾಣ ಪತ್ರ ಪಡೆದವರ ಮೇಲೆ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸಮಾಜ ಸಂಘದ ಕಲಬುರ್ಗಿ ವಿಭಾಗೀಯ ಅಧ್ಯಕ್ಷರಾದ ನಂದಕುಮಾರ ಮಾಲಿ ಪಾಟೀಲ್ ಹಾಗೂ ಇತರ ಮುಖಂಡರು ಜೊತೆಗೂಡಿ ಸಚಿವರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಸಮಸ್ಯೆಯ ಗಂಬಿೀರತೆಯನ್ನು ಮನವರಿಕೆ ಮಾಡಿಕೊಟ್ಟರು.

ಸರಕಾರ ಒಂದೆಡೆ ನಕಲಿ ಎಸ್. ಟಿ. ಪ್ರಮಾಣಪತ್ರ ಪಡೆದವರ ವಿರುದ್ಧ ಮೃದುಧೋರಣೆ ತಾಳುತ್ತಿದೆ. ಮತ್ತೆ ಹಿಂದುಳಿದ ವರ್ಗದಲ್ಲಿರುವ ಪ್ರಬಲ ಜಾತಿಯನ್ನು ಎಸ್.ಟಿ ಗೆ ಸೇರಿಸುವ ಮುನ್ನ ಅಲ್ಲಿ ಅವರು ಪಡೆಯುತ್ತಿದ್ದ ಮೀಸಲಾತಿಯ ಪ್ರಮಾಣವನ್ನು ಎಸ್.ಟಿ ಗೆ ಸೇರಿಸಿ ಮೀಸಲಾತಿ ಪ್ರಮಾಣ ಹೆಚ್ಚಿಸುವುದರ ಮೂಲಕ ಎಸ್.ಟಿ ಸೇರಿಸಬೇಕೆಂಬ ಹೇಳಿಕೆಗಳು ಸರಕಾರದ ಸಚಿವರಿಂದ ಬರಬೇಕಾಗಿದೆ ಎನ್ನುವುದನ್ನು ಮನವರಿಕೆ ಮಾಡಿಕೊಡಲಾಯಿತು.

ಇದಕ್ಕೆ ಸ್ಪಂದಿಸಿದ ಸಚಿವರು ಸಿ.ಎಂ ಜೊತೆ ಚರ್ಚಿಸಿ ಎಸ್.ಟಿ ಹೆಸರಿನ ಮೇಲೆ ಹಿಂದುಳಿದ ವರ್ಗದವರು ಪ್ರಮಾಣ ಪತ್ರ ಪಡೆದು ಮೀಸಲಾತಿ ದುರುಪಯೋಗ ಪಡಿಸಿಕೊಳ್ಳುತ್ತಿರುವವರ



ಮೇಲೆ ಕಠಿಣ ಕ್ರಮ ತೆಗೆದು ಕೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾರುತಿ ಜಮಾದಾರ್, ಗುರು ಸುಭೇದಾರ್, ಗುರು ನರಬೋಳ, ಶ್ರವಣ ಕುಮಾರ್ ನಾಯಕ, ಮಹೇಶ ನಾಯಕ, ಬಾಗು ನಾಯಕ, ಮಹದೇವ ಚೂರಿ, ನಂದಕುಮಾರ ನಾಯಕ, ಸಾಯಿಬಣ್ಣ ಲಾಲ್ದಾಪುರು, ದೇವು ಲಕಣಾಪುರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರಾಯಚೂರು ಜಿಲ್ಲೆಯಲ್ಲಿ ಭಾರಿ ಮಳೆ: ಬೆಳೆಹಾನಿ ಸಮೀಕ್ಷೆ ಆರಂಭಿಸಲು ಜಿಲ್ಲಾಧಿಕಾರಿಗಳ ಸೂಚನೆ

ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.29–**ಜಿಲ್ಲೆಯಲ್ಲೆ ಕೆಲ ದಿನಗಳಿಂದ ನಿರಂತರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತೆ ವಹಿಸಲು ಮತ್ತು ಬೆಳೆ ಹಾನಿ ಸಮೀಕ್ಷೆ ಸಂಬಂಧ ಚರ್ಚಿಸಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರ ಅಧ್ಯಕ್ಷತೆಯಲ್ಲಿ ಸಭೆ ಹಾಗೂ ವಿಡಿಯೋ ಸಂವಾದ ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆ ಹಾಗೂ ವಿಡಿಯೋ ಸಂವಾದದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಜಿಲ್ಲೆಯ ವಿವಿಧೆಡೆ ಭಾರಿ ಮಳೆಯಾಗುವುದಾಗಿ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿತ್ತು. ಅದರಂತೆ ಕಳೆದ ಕಳೆದ ಮುರ್ನಾಲ್ಕು ದಿನಗಳಿಂದ ರಾಯಚೂರ ಜಿಲ್ಲೆಯ ಬಹುತೇಕ ಎಲ್ಲಾ ಕಡೆ ವಿಪರೀತವಾಗಿ ಮಳೆ ಸುರಿದಿದೆ. ತೀವ್ರ ಮಳೆಯಿಂದಾಗಿ ಜಿಲ್ಲಾ ವ್ಯಾಪ್ತಿಯ ಬಹುತೇಕ ಎಲ್ಲಾ ಹಳ್ಳ ಕೊಳ್ಳಗಳು ತುಂಬಿ ಹರಿಯುತ್ತಿವೆ. ಮಳೆಯಿಂದಾಗಿ ಜಮೀನುಗಳಲ್ಲಿ ನೀರು ನಿಂತಿರುವುದನ್ನು ತಾವು ಕ್ಷೇತ್ರ ಭೇಟಿ ವೇಳೆ ಖುದ್ದು ವೀಕ್ಷಣೆ ಮಾಡಿದ್ದು, ಹಾನಿಗೊಳಗಾದ ರೈತರಿಗೆ ತಕ್ಷಣ ಸ್ಪಂದಿಸುವ ನಿಟ್ಟಿನಲ್ಲಿ ಮಳೆಯಿಂದಾದ ಬೆಳೆಹಾನಿ ಸಮೀಕ್ಷೆಯ ಪ್ರಕ್ರಿಯೆಯನ್ನು ಜಿಲ್ಲೆಯಲ್ಲಿ ಕೂಡಲೇ ಆರಂಭಿಸಿ ಯುದ್ಧೋಪಾದಿಯಲ್ಲಿ ನಡೆಸಬೇಕು ಎಂದು ಕೃಷಿ ಸೇರಿದಂತೆ ಸಂಬಂಧಿಸಿದ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲೆ ಬೆಳೆಹಾನಿ ಸಮೀಕ್ಷೆಗೆ ಜಿಲ್ಲಾ ಉಸ್ತುವಾರಿ ಸಚಿವರು ಸೂಚನೆ ನೀಡಿದ್ದಾರೆ. ರೈತರಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗದಂತೆ, ಹಾನಿಯಾದ ಬೆಳೆಗೆ ನ್ಯಾಯಯುತವಾಗಿ ಪರಿಹಾರ ಸಿಗುವ ಹಾಗೆ ಅಧಿಕಾರಿಗಳು ಸಮೀಕ್ಷೆಯನ್ನು ಅತ್ಯಂತ ಶ್ರದ್ಧೆಯಿಂದ ನಡೆಸಬೇಕು. ಹತ್ತಿ, ಭತ್ತ, ತೊಗರಿ, ಜೋಳ ಸೇರಿದಂತೆ ಈಗ ಬಿತ್ತನೆಯಾದ ಎಲ್ಲ ಬೆಳೆಗಳ ಹಾನಿಯ ಸಮೀಕ್ಷೆ ನಡೆಯಬೇಕು. ತೋಟಗಾರಿಕಾ ಬೆಳೆಹಾನಿಯ ಸಮೀಕ್ಷೆ ಕೂಡ ಜೊತೆಜೊತೆಗೆ ನಡೆಯಬೇಕು. ಇದಕ್ಕಾಗ ಕೃಷಿ, ತೋಟಗಾರಿಕೆ ಸೇರಿದಂತೆ ಬೇರೆ ಬೇರೆ ಇಲಾಖೆಗಳು ಸಮನ್ವಯ ಸಾಧಿಸಿ ಸಮೀಕ್ಷಾ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

**ಜಂಟಿ ಸಮೀಕ್ಷೆಗೆ ಸೂಚನೆ:** ಮಳೆಯಿಂದಾಗಿ ಜಾನುವಾರು–ಜೀವಹಾನಿ ಸಮೀಕ್ಷೆ, ಮನೆ ಹಾನಿ ಸಮೀಕ್ಷೆ ಕೂಡ ಜೊತೆಜೊತೆಗೆ ನಡೆಯಬೇಕು. ಜಾನುವಾರು–ಜೀವಹಾನಿ ಹಾಗೂ ಮನೆ ಹಾನಿಗೆ ಕಾಲಮಿತಿಯೊಳಗಡೆ ಪರಿಹಾರ ಸಿಗುವಂತೆ ತುರ್ತು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

**ತಹಸೀಲ್ದಾರ, ತಾಪಂ ಇಓಗಳಿಗೆ ಸೂಚನೆ:** ವಿಡಿಯೋ ಸಂವಾದದ ಮೂಲಕ ಜಿಲ್ಲೆಯ ಎಲ್ಲಾ ಕಡೆಗಿನ ಮಳೆಯಿಂದಾದ ಹಾನಿಯ ಬಗ್ಗೆ ಮಾಹಿತಿ ಪಡೆದುಕೊಂಡ ಜಿಲ್ಲಾಧಿಕಾರಿಗಳು, ಎಲ್ಲ ತಾಲೂಕುಗಳಲ್ಲಿ ಬೆಳೆಹಾನಿಯ ಸಮೀಕ್ಷಾ ಕಾರ್ಯ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಕೃಷಿ, ತೋಟಗಾರಿಕಾ ಇಲಾಖೆಯ ಅಧಿಕಾರಿಗಳೊಂದಿಗೆ ಕಂದಾಯ ಇಲಾಖೆಯ ಅಧಿಕಾರಿಗಳು ಸಮನ್ವಯ ಸಾಧಿಸಿ ಸಮೀಕ್ಷಾ ಕಾರ್ಯಕ್ಕೆ ಸಹಕರಿಸಬೇಕು. ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ಎಲ್ಲ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮೇಲೆ ಸೂಕ್ತ ಮೇಲ್ವಿಚಾರಣೆ ನಡೆಸಿ ಗ್ರಾಮೀಣ ಪ್ರದೇಶದಲ್ಲಿ ಜನತೆಗೆ ಸ್ಪಂದನೆ ಸಿಗುವ ಹಾಗೆ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.



**ಮುಂಜಾಗ್ರತೆ ವಹಿಸಿ:** ಮುಖ್ಯವಾಗಿ ಮಳೆಯಿಂದ ಸಂಭವಿಸ ಬಹುದಾದ ಪ್ರವಾಹ ಪರಿಸ್ಥಿತಿಯ ಬಗ್ಗೆ ಮುಂಜಾಗ್ರತೆ ವಹಿಸಬೇಕು. ತುರ್ತು ಕ್ರಮಗಳು, ಜನರ ಸುರಕ್ಷತೆ ಹಾಗೂ ಅಗತ್ಯ ಸೌಲಭ್ಯಗಳ ಕುರಿತಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಜಿಲ್ಲಾಡಳಿತ ನೀಡುವ ಎಲ್ಲಾ ನಿರ್ದೇಶನಗಳನ್ನು ಪ್ರತಿಯೊಂದು ಇಲಾಖೆಯ ಅಧಿಕಾರಿಗಳು ಪಾಲನೆ ಮಾಡಬೇಕು ಎಂದು ಸೂಚನೆ ನೀಡಿದರು.

**ಜನತೆಗೆ ಸ್ಪಂದಿಸಿ:** ಕಳೆದ ಮರ್ನಾಲು ದಿನಗಳಿಂದ ಇಡೀ ರಾಯಚೂರು ಜಿಲ್ಲೆಯ ವಾತಾವರಣ ಸಂಪೂರ್ಣ ಬದಲಾಗಿದೆ. ಮಲೆನಾಡಿನ ರೀತಿಯಲ್ಲಿ ವಾತಾವರಣ ಕಾಣುತ್ತಿದೆ. ಈ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಜನತೆಗೆ ಸ್ಪಂದಿಸಲೇಬೇಕು. ಅಧಿಕಾರಿಗಳು ಮತ್ತು ಸಿಬ್ಬಂದಿ ಕೇಂದ್ರ ಸ್ಥಾನದಲ್ಲಿದ್ದು ಕಾರ್ಯ ನಿರ್ವಹಿಸಬೇಕು. ಜನರ ಕರೆಗಳನ್ನು ಸ್ವೀಕರಿಸಿ ಸ್ಪಂದನೆ ನೀಡಬೇಕು ಎಂದು ತಿಳಿಸಿದರು.

**ಜನತೆಗೆ ಮುನ್ನೆಚ್ಚರಿಕೆ ನೀಡಿ:** ಜಿಲ್ಲೆಯ ಎಲ್ಲಾ ಕಡೆಗಳಲ್ಲಿನ ಹಳ್ಳಕೊಳ್ಳಗಳು ತುಂಬಿ ನದಿಯತ್ತ ಹರಿಯುತ್ತಿವೆ. ಈ ವೇಳೆ ನದಿ ನೀರಿನ ಪ್ರಮಾಣ ಏಕಾಏಕಿ ಹೆಚ್ಚಲಿದೆ. ರಭಸವಾಗಿ ಹರಿಯಲಿದೆ. ಹೀಗಾಗಿ ತುಂಗಾಭದ್ರಾ ಮತ್ತು ಕೃಷ್ಣಾ ನದಿ ತೀರದ ಜನರಿಗೆ ಮುಂಜಾಗ್ರತೆ ವಹಿಸಲು ಎಚ್ಚರಿಕೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜೆಸ್ಕಾಂಗೆ ಅಧಿಕಾರಿಗಳಿಗೆ ಸೂಚನೆ: ಮಳೆಯಿಂದಾಗಿ ಜಮೀನಿನಲ್ಲಿ ನೀರು ನಿಂತಿರುವುದು ಕಾಣುತ್ತಿದೆ. ಕೆಲವು ಕಡೆಗಳಲ್ಲಿ ಜಮೀನುಗಳಲ್ಲಿನ ವಿದ್ಯುತ್ ಕಂಬಗಳು ಬಾಗಿವೆ. ಮಳೆಗಾಳಿ ಯಿಂದಾಗಿ ಅಲ್ಲಲ್ಲಿ ವಿದ್ಯುತ್ ತಂತಿಗಳು ಗಿಡಮರಗಳ ಮಧ್ಯೆ ಸಿಲುಕುವ ಸಾಧ್ಯತೆ ಇರುತ್ತದೆ. ಹೀಗಾಗಿ ಜೆಸ್ಕಾಂ ಅಧಿಕಾರಿಗಳು, ಅವಘಡಗಳು ಸಂಭವಿಸದಂತೆ ಮುಂಜಾಗ್ರತೆ ವಹಿಸಬೇಕು. ಎಲ್ಲಾ ತಾಲೂಕುಗಳಲ್ಲಿ ಸಂಚಾರ ನಡೆಸಿ ಪರಿಶೀಲಿಸಬೇಕು ಎಂದು ತಿಳಿಸಿದರು.

**ಅಮಾನತು ಎಚ್ಚರಿಕೆ:** ಬಹುತೇಕ ವರ್ಷಗಳ ನಂತರ ರಾಯಚೂರ ಜಿಲ್ಲೆಯಲ್ಲಿ ದಾಖಲೆಯ ರೀತಿ ಮಳೆ ಬಿದ್ದಿದೆ. ಈ ವೇಳೆ ನಾವು ರೈತರು ಸೇರಿದಂತೆ ಎಲ್ಲಾ ಸಾರ್ವಜನಿಕರಿಗೆ ಸ್ಪಂದನೆ ನೀಡಬೇಕು. ತೀವ್ರ ಮಳೆ ಸಂದರ್ಭದಲ್ಲಿ ಅಧಿಕಾರಿಗಳು, ಸಿಬ್ಬಂದಿ ಸ್ಪಂದನೆ ನೀಡುತ್ತಿಲ್ಲ ಎಂದು ದೂರುಗಳು ಬಂದಲ್ಲಿ, ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಮಾನತು ಶಿಕ್ಷೆಗೊಳಪಡಿ ಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ವಿಡಿಯೋ ಸಂವಾದ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಈಶ್ವರ್ ಕಾಂದೂ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತರು, ತಹಸೀಲ್ದಾರರು, ಕೃಷಿ, ತೋಟಗಾರಿಕೆ, ಪಶುಪಾಲನೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷರಾಗಿ ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು ನೇಮಕ

ಯುವ ಮಾರ್ಗ ಸುದ್ದಿ



**ರಾಯಚೂರು,ಸೆ.29–**ಆರ್ಯ ವೈಶ್ಯ ಸಮಾಜದ ಸಾಹಿತಿಗಳು, ಸಾಹಿತ್ಯಾಸಕ್ತರು ಮತ್ತು ಸಾಂಸ್ಕೃತಿಕ ಮನಸ್ಸುಗಳನ್ನು ಒಗ್ಗೂಡಿಸಿ ಸವಾಜದ ಪ್ರತಿಭೆಗಳನ್ನು ಮುಖ್ಯವಾಹಿನಿಗೆ ಪರಿಚಯಿಸುವ ಕಾರ್ಯದಲ್ಲಿ ನಿರತವಾಗಿರುವ ರಾಜ್ಯ ಮಟ್ಟದ ಸಂಘಟನೆಯಾದ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ಬೆಂಗಳೂರಿನ ರಾಜ್ಯ ಕಾರ್ಯಕಾರಿ ಸಮಿತಿಯ ಅನುಮೋದನೆಯಂತೆ ಮಕ್ಕಳ ಸಾಹಿತಿಗಳಾದ ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು ಅವರನ್ನು ರಾಯಚೂರು ಜಿಲ್ಲಾ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ನೇಮಕಾತಿ ಆದೇಶವನ್ನು ನೀಡಿದ ರಾಜ್ಯಾಧ್ಯಕ್ಷರಾದ ಕೆ.ಎಲ್. ನಟರಾಜ ಅವರು ಪರಿಷತ್ತಿನ ನಿಯಮಾವಳಿಯಂತೆ ಜಿಲ್ಲಾ ಸಮಿತಿಯನ್ನು ರಚಿಸಿಕೊಂಡು ಮುಂದಿನ ಐದು ವರ್ಷಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಜಿಲ್ಲೆಯ ಪ್ರತಿಭೆಗಳನ್ನು ಮುಖ್ಯವಾಹಿನಿಗೆ ತರುವ ಕಾರ್ಯ ನಿಮ್ಮಿಂದಾಗಲಿ ಎಂದು ಅಭಿನಂದಿಸಿದ್ದಾರೆ.

# ದಸಂಸ ಸರ್ವ ಸದಸ್ಯರ ರಾಜ್ಯ ಮಟ್ಟದ ಸಭೆ : ಪ್ರಭುಲಿಂಗ ಮೇಗಳಮನಿ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಸೆ.29–** ಕರ್ನಾಟಕ ರಾಜ್ಯ, ದಲಿತ ಸಂಘರ್ಷ ಸಮಿತಿ ಸರ್ವ ಸದಸ್ಯರ ರಾಜ್ಯ ಮಟ್ಟದ ಸಭೆಯನ್ನು ಅ.5 ಭಾನುವಾರ ಬೆಳಿಗ್ಗೆ 11 ಗಂಟೆಗೆ ಜೈಭೀಮ ಭವನ ಕೆನರಾ ಬ್ಯಾಂಕ್ ಎಸ್‌ಸಿ, ಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ನ್ಯೂ ವಿಷನ್ ರಸ್ತೆ ಬೆಂಗಳೂರಲ್ಲಿ ಕರೆಯಲಾಗಿದೆ ಎಂದು ದಸಂಸ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪ್ರಭುಲಿಂಗ ಮೇಗಳಮನಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ಅಂದಿನ ದಿನದ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸಂಘಟನಾ ಸಂಚಾಲಕ ಶ್ಯಾಮರಾವ್ ಘಾಟಗೇರ್ ವಹಿಸಲಿದ್ದಾರೆ. ರಾಜ್ಯ ಸಂಘಟನಾ ಸಂಚಾಲಕ ಎಫ್.ವೈ. ದೊಡ್ಡಮನಿ, ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕಿ ಶೋಭಾ ಕಟ್ಟಿಮನಿ ಸೇರಿ ಹಲವು ಮುಖಂಡರು ಪಾಲ್ಗೊಳ್ಳಲಿದ್ದಾರೆ ರಾಜ್ಯದ ಎಲ್ಲಾ ಜಿಲ್ಲೆ, ತಾಲೂಕು ಮಟ್ಟದ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಪ್ರಭುಲಿಂಗ ಮೇಗಳಮನಿ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಶಾರದಾ ಶಿಕ್ಷಣ ಸಂಸ್ಥೆಗೆ 'ಅಕ್ಷರ ದಾಸೋಹಿ' ಪ್ರಶಸ್ತಿ: ಬಿ. ಮಧುಸೂದನ್ ಗುಪ್ತಾಜೀ ಶಿಕ್ಷಣ ಕ್ರಾಂತಿಗೆ ಗೌರವ!

ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.29– ಪಟ್ಟಣದ ಶಾರದಾ ಶಿಕ್ಷಣ ಸಂಸ್ಥೆ(ರಿ) ಯನ್ನು ಸ್ಥಾಪಿಸಿ, ಈ ಭಾಗದಲ್ಲಿ ಶಿಕ್ಷಣ ಕ್ರಾಂತಿಗೆ ನಾಂದಿ ಹಾಡಿದ ದಿವಂಗತ ಬಿ. ಮಧುಸೂದನ್ ಗುಪ್ತಾಜೀ ಅವರ ಶೈಕ್ಷಣಿಕ ಕೊಡುಗೆಯನ್ನು ಸ್ಮರಿಸಿ, ಸಂಸ್ಥೆಗೆ ಮಾನ್ವಿ ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘದ ವತಿಯಿಂದ 'ಅಕ್ಷರ ದಾಸೋಹಿ' ಪ್ರಶಸ್ತಿ ನೀಡಿ ಗೌರವಿಸಲಾಯಿತು.**

**1991 ರಲ್ಲಿ ಮಾನ್ವಿ ಪಟ್ಟಣದಲ್ಲಿ ಪ್ರಥಮ ಬಾರಿಗೆ ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ ಕೀರ್ತಿ ಮಧುಸೂದನ್ ಗುಪ್ತಾಜೀ ಅವರಿಗೆ ಸಲ್ಲುತ್ತದೆ. ಶಾರದಾ ಶಿಕ್ಷಣ ಸಂಸ್ಥೆ ನಂತರದಲ್ಲಿ ಹೈಸ್ಕೂಲ್, 2001 ರಲ್ಲಿ ಪಿ.ಯು.ಸಿ, 2007 ರಲ್ಲಿ ಡಿ.ಇಡಿ, ಹಾಗೂ 2014 ರಲ್ಲಿ ಬಿ.ಇಡಿ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಸ್ಥಳೀಯರಿಗೆ ವೃತ್ತಿಪರ ಕೋರ್ಸ್‌ಗಳ ಜೊತೆಗೆ, ದೂರ ಶಿಕ್ಷಣದ** NIOS **ಮತ್ತು** KOS **ಕೋರ್ಸ್‌ಗಳನ್ನೂ ಪರಿಚಯಿಸಿ ಶಾಲೆ ಬಿಟ್ಟ ವಿದ್ಯಾರ್ಥಿಗಳಿಗೂ ಶಿಕ್ಷಣದ ಅವಕಾಶ ಕಲ್ಪಿಸಿತು.**

**ಸಂಸ್ಥೆಯ ಈ ಬಹುಮುಖಿ ಸಾಧನೆ ಮತ್ತು ಭಾಗಕ್ಕೆ ಅಕ್ಷರ**



**ಕ್ರಾಂತಿಯನ್ನು ಮಾಡಿದ ಕೊಡುಗೆಯನ್ನು ಗುರುತಿಸಿ ಈ ಪ್ರತಿಷ್ಠಿತ 'ಅಕ್ಷರ ದಾಸೋಹಿ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.**

**ದಿವಂಗತ ಮಧುಸೂಧನ್ ಗುಪ್ತಾಜೀ ಅವರ ಪುತ್ರಿಯಾದ ಡಾ॥ ಬಿ. ಹೈಂದವಿ ಅವರು ಸಂಸ್ಥೆಯ ಪರವಾಗಿ ಪ್ರಶಸ್ತಿಯನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, "ನಮ್ಮ ತಂದೆಯವರು ಕಟ್ಟಿ ಬೆಳೆಸಿದ ಈ ಶಿಕ್ಷಣ ಸಂಸ್ಥೆಯನ್ನು ನಾವು ಕೂಡ ಅವರಂತೆಯೇ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ, ಅತ್ಯಂತ ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ" ಎಂದು ತಿಳಿಸಿ ಕೃತಜ್ಞತೆ ಸಲ್ಲಿಸಿದರು.**

# ಮೂರು ಬಾರಿ ಗೆದ್ದಿರುವ ಶಾಸಕ ಮಾನಪ್ಪ ವಜ್ಜಲ್‌ರ ಕೊಡುಗೆ ಏನು : ಗೋವಿಂದ ನಾಯಕ

ಯುವ ಮಾರ್ಗ ಸುದ್ದಿ




**ಲಿಂಗಸುಗೂರು,ಸೆ.29–** ಮೀಸಲು ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾದ ಮಾನಪ್ಪ ವಜ್ಜಲ್‌ರು ಕ್ಷೇತ್ರದಲ್ಲಿ ಮಾಡಿದ ಕೊಡುಗೆ ಏನು ಎಂಬುದು ಜನರಿಗೆ ಗೊತ್ತಿದೆ, ಬಂದ ಅನುದಾನವನ್ನು ಸರಿಯಾಗಿ ಬಳಸಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮಾಜಿ ಶಾಸಕ ಡಿ.ಎಸ್ ಹೂಲಗೇರಿ ಅವರು ಒಂದೇ ಬಾರಿ ಶಾಸಕರಾದರು ಕ್ಷೇತ್ರಕ್ಕೆ 1200ಕೋಟಿ ಅನುದಾನ ತಂದು, ತಾಯಿ ಮಕ್ಕಳ ಆಸ್ಪತ್ರೆ, ಉದ್ಯಾನವನ, ಡಿಜಿಟಲ್ ಗ್ರಂಥಾಲಯ, ಕೋರ್ಟ್, ಸಬ್ ರಿಜಿಸ್ಟರ್ ಕಛೇರಿ, ಬಸವೇಶ್ವರ ಮೂರ್ತಿ, ಅಂಬೇಡ್ಕರ್ ಭವನ, ಕೃಷಿ ಕಚೇರಿ ಇನ್ನಿತರ ಹಲವಾರು ಕೆಲಸ ಕಾರ್ಯವನ್ನು ಮಾಡಿದ್ದಾರೆ. ನಿಮಗೆ ಬಂದ ಅನುದಾನವನ್ನು ಸಿಸಿರಸ್ತೆ, ಚೆಕ್ ಡ್ಯಾಂ ಕಳಪೆ ಮಟ್ಟದ ಕಾಮಗಾರಿ ಮಾಡುತ್ತಿದ್ದಿರಿ ಎಂದು ವಾಗ್ದಾಳಿ ನಡೆಸಿದರು.

ಕ್ಷೇತ್ರದ ಅಭಿವೃದ್ಧಿಗೆ ಬರುವ ಅನುದಾನವನ್ನು ಸಮರ್ಪಕವಾಗಿ ಬಳಸಿ, ಗುಣಮಟ್ಟದ ಕಾಮಗಾರಿಗಳನ್ನು ಮಾಡಿ ಜನರ ಗಮನ ಬೇರೆಡೆಗೆ ಸೆಳೆಯಲು ವೃಥಾ ಆರೋಪ ಮಾಡಬೇಡಿ ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡರು ಮಾಜಿ ಶಾಸಕರ ಬಗ್ಗೆ ಹಗುರವಾಗಿ ಮಾತಾಡಿರುವುದು ತಪ್ಪು. ಕ್ಷೇತ್ರದ ಅಭಿವೃದ್ಧಿಗೆ ಬಂದ ಅನುದಾನ ಸಮರ್ಪಕ ಬಳಕೆಗೆ ಕೇಳುವುದು ತಪ್ಪೇ? ಶಾಸಕರಿಗೆ ಬಂದು ಅನುದಾನ ಒಂದೇ ಇಲಾಖೆಗೆ ಕೊಟ್ಟಿದ್ದನ್ನು ಪ್ರಶ್ನಿಸಿದ್ದು ತಪ್ಪೇ? ಬೇರೆ ಬೇರೆ ಇಲಾಖೆಗಳಿಗೆ ಅನುದಾನ ಹಂಚಿಕೆ ಮಾಡಿ ತ್ವರಿತಗತಿಯಲ್ಲಿ ಅಭಿವೃದ್ಧಿ ಮಾಡಲು ಹೇಳಿರುವುದು ತಪ್ಪೇ? ತಮ್ಮ ತಪ್ಪನ್ನು ಮರೆಮಾಚಲು ಮಾಜಿ ಶಾಸಕರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಸರಕಾರ ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿರುವ ಹಣ ರಾಜ್ಯದಲ್ಲಿ ಸದ್ಬಳಕೆಯಾಗಿತ್ತಿದೆ ಜನಸಾಮಾನ್ಯರು, ಮಹಿಳೆಯರು ಇದರಿಂದ ಸಂತೃಪ್ತರಾಗಿದ್ದಾರೆ. ಶಾಸಕರಿಗೆ ಅಭಿವೃದ್ಧಿಗಾಗಿ ಕೋಟಿಗಟ್ಟಲೇ ಅನುದಾನ ನೀಡಲಾಗಿದೆ. ಬಂದ ಅನುದಾನ ಸಮರ್ಪಕವಾಗಿ ಬಳಸಿ ಕ್ಷೇತ್ರದ ಜನರ ಋಣ ತೀರಿಸುವ ಕೆಲಸ ಮಾಡಬೇಕೆ ಹೊರತು ಜನರ ದಾರಿ ತಪಿಸುವ ಕೆಲಸ ಮಾಡಬಾರದು ಎಂದು ಕಟುವಾಗಿ ನುಡಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಅಧ್ಯಕ್ಷ ವೆಂಕಟೇಶ ಗುತ್ತೆದಾರ, ಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರು, ಎಸ್ ಸಿ ಘಟಕ ಅಧ್ಯಕ್ಷ ಉಮೇಶ ಹುನಕುಂಟಿ, ಶಿವಣ್ಣ ಕೋತಾ, ಪುರಸಭೆ ಸದಸ್ಯ ಮಹಮ್ಮದ್ ರಫಿ, ಬಾಳೇಗೌಡ, ಬಸವರಾಜ ಮೇಗಳಪೇಟೆ, ಖಾಜಾಹುಸೇನ್ ಪೂಲೆವಾಲೆ, ಗಂಗಮ್ಮ ಕಟ್ಟಿಮನಿ, ಸಂಜೀವಪ್ಪ ಹುನಕುಂಟಿ, ಗದ್ದೆನಗೌಡ ಸೇರಿದಂತೆ ಇದ್ದರು.

# ಸೀರೆ, ಹಣ ಕೊಡಿಸುವುದಾಗಿ ನಂಬಿಸಿ ವೃದ್ಧೆಯ ಚಿನ್ನಾಭರಣ ಕಳವು

**ಕಲಬುರಗಿ,ಸೆ.29–**ಸೀರೆ, ಹಣ ಕೊಡಿಸುವುದಾಗಿ ನಂಬಿಸಿ ವೃದ್ಧೆಯ ಕೊರಳಲ್ಲಿದ್ದ ಚಿನ್ನಾಭರಣ ದೋಚಿಕೊಂಡು ಹೋಗಿರುವ ಘಟನೆ ನಗರದಲ್ಲಿ ನಡೆದಿದೆ.

ಆಳಂದ ತಾಲ್ಲೂಕಿನ ಕೊಡಲಹಂಗರಗಾ ಗ್ರಾಮದ ಪದ್ಮಾವತಿ ನಾಗೇಂದ್ರಪ್ಪಾ ಹಡಪದ (65) ಎಂಬುವವರೆ ಚಿನ್ನಾಭರಣ ಕಳೆದುಕೊಂಡು ಕಂಗಾಲಾಗಿದ್ದಾರೆ.

ಇವರು ಬಸವಕಲ್ಯಾಣ ಸಮೀಪದ ತಡೋಳ ಗ್ರಾಮದಲ್ಲಿರುವ ಮಗಳ ಮನೆಗೆ ಹೋಗಿ ಮರಳಿ ತಡೋಳದಿಂದ ಕಲಬುರಗಿಗೆ ಆಗಮಿಸಿದ್ದಾರೆ. ಕೊಡಲಹಂಗರಗಾ ಗ್ರಾಮಕ್ಕೆ ಹೋಗಲು ಆಳಂದ ಚೆಕ್‌ಪೋಸ್ಟ್ ಹತ್ತಿರ ಬಸ್ಸಿಗಾಗಿ ಕಾಯುತ್ತ ಕುಳಿತಿದ್ದಾಗ ಅಲ್ಲಿಗೆ ಆಗಮಿಸಿದ ಅಪರಿಚಿತ ಮಹಿಳೆಯೊಬ್ಬಳು ಗುರುತು, ಪರಿಚಯದವರಂತೆ ನಟಿಸಿದ್ದಾಳೆ. ಆಗ ಪದ್ಮಾವತಿ ಅವರು, ಮಹಿಳೆ ತಮ್ಮೂರಿನವಳೇ ಇರಬೇಕೆಂದು ನಂಬಿದ್ದಾರೆ. ಆಗ ಮಹಿಳೆ ಖಾದ್ರಿ ಚೌಕ್ ಹತ್ತಿರವಿರುವ ಅನಾಥಾಶ್ರಮದಲ್ಲಿ ನಿಮ್ಮಂತೆ ವಯಸ್ಸಾದವರಿಗೆ 2 ಸೀರೆ, 15 ಸಾವಿರ ರೂ.ನಗದು ಹಣ ನೀಡುತ್ತಿದ್ದಾರೆ. ನಾನು ಈಗಾಗಲೇ ಊರಲ್ಲಿ 3–4 ಜನರಿಗೆ ಕೊಡಿಸಿದ್ದೇನೆ. ನಿಮಗೂ ಕೊಡಿಸುತ್ತೇನೆ ಎಂದು ನಂಬಿಸಿದ್ದಾಳೆ. ಮಹಿಳೆಯ ಮಾತು ನಂಬಿ ಪದ್ಮಾವತಿ ಅವರು ಆಕೆಯ ಜೊತೆ ಆಟೋದಲ್ಲಿ ಖಾದ್ರಿ ಚೌಕ್‌ಗೆ ಹೋಗಿದ್ದಾರೆ. ಆಟೋದಿಂದ ಇಳಿದ ನಂತರ ಅನಾಥಾಶ್ರಮದಲ್ಲಿ ಬಂಗಾರದ ಆಭರಣ ನೋಡಿದರೆ ಸೀರೆ, ಹಣ ಕೊಡುವುದಿಲ್ಲ ಅವುಗಳನ್ನು ಒಂದು ಕಾಗದಲ್ಲಿ ಕಟ್ಟಿ ಇಟ್ಟುಕೊಳ್ಳಿ ಎಂದಿದ್ದಾಳೆ. ಮಹಿಳೆ ಹೇಳಿದಂತೆ ಪದ್ಮಾವತಿ ಅವರು ತಮ್ಮ ಬಳಿ ಇದ್ದ 50 ಸಾವಿರ ರೂಪಾಯಿ ಮೌಲ್ಯದ 6 ಗ್ರಾಂ.ಪತ್ತಿ, 4 ಗ್ರಾಂ.ಗುಂಡ ಗುಳ್ಳ, 35 ಸಾವಿರ ರೂ.ಮೌಲ್ಯದ 7 ಗ್ರಾಂ.ಬಂಗಾರದ ಬೋರಮಳವನ್ನು ಕಾಗದದಲ್ಲಿ ಕಟ್ಟಿದ್ದಾರೆ. ಆಗ ಮಹಿಳೆ, ಪದ್ಮಾವತಿ ಅವರ ಕೈಯಿಂದ ಅದನ್ನು ತೆಗೆದುಕೊಂಡು ಅಂತಹದೆ ಕಾಗದದ ಪೊಟ್ಟಣ ಇವರ ಕೈಯಲ್ಲಿ ಕೊಟ್ಟು ಒಳಗೆ ಹೋಗಿ ಬರುತ್ತೇನೆ ಎಂದು ಹೇಳಿ ಅಲ್ಲಿಂದ ಪರಾರಿಯಾಗಿದ್ದಾಳೆ. ಈ ಬಗ್ಗೆ ಪದ್ಮಾವತಿ ಅವರು ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ ತನಿಖೆ ನಡೆದಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H